

MAG(2) PRB/CR/70/2022-23 REG NO: KARKAN27951

# ಮುಂಜಾನೆ ವಾರ್ತೆ

MUNJANE VARTHE

ಇ-ಪೇಪರ್: www.munjaneevartheepaper.com

EDITOR: H.L.AMARANATH

ಸಂಪಾದಕ: ಹೆಚ್.ಎಲ್ ಅಮರನಾಥ್ ಕನ್ನಡ ದಿನಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ 9663122276

website: munjanevarthe.com

Volume: 02 Issue: 96 | ಸಂಪುಟ: 02 | ಸಂಚಿಕೆ: 96 | ಪುಟಗಳು: 04 | munjanevarthe | 21 TUESDAY MAY 2024 | 21 ಮಂಗಳವಾರ ಮೇ 2024 | ₹ 2

**ಬರ ಪರಿಹಾರ ಹಣ ಬಿಡುಗಡೆ: ಜಿಲ್ಲಾಧಿಕಾರಿ ಮಿಶ್ರಾ** ವಿವರಪುಟ 02

**ತೋಟಗಾರಿಕಾ ಬೆಳೆಗಳಿಗೆ ಪರಿಹಾರ ನೀಡಲು ಒತ್ತಾಯಿಸಿ ಪ್ರತಿಭಟನೆ** ವಿವರಪುಟ 03

**ಹೃದಯ ಕವಾಟ ವಲಯದಲ್ಲಿ ಪ್ರಮುಖ ಮೂರು ವೈದ್ಯಕೀಯ ಪ್ರಯೋಗ** ವಿವರಪುಟ 04

## 'ಗ್ಯಾರಂಟಿ ಯೋಜನೆ ನಿಲ್ಲುವುದಿಲ್ಲ'

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದು ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಸಿಎಂ ಮಾಧ್ಯಮ ಸಂವಾದ ನಡೆಸಿದರು.



ಈ ವೇಳೆ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತನಾಡಿದ ಅವರು, ಶಕ್ತಿ ಯೋಜನೆಯಲ್ಲಿ ಈವರೆಗೆ 201 ಕೋಟಿ ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. 4,857.95 ಕೋಟಿ ರೂ. ಉಚಿತ ಟಿಕೆಟ್ ಮೌಲ್ಯವಾಗಿದೆ. ಅನ್ನ ಭಾಗ್ಯ ಯೋಜನೆಯಡಿ 4.10 ಕೋಟಿ ಫಲಾನುಭವಿಗಳಿಗೆ 5754.6 ಕೋಟಿ ರೂ. ಹಣ ನೀಡಿದ್ದೇವೆ.

ಗೃಹ ಜ್ಯೋತಿಯಡಿ 1.60 ಕೋಟಿ ಜನರಿಗೆ 200 ಯುನಿಟ್ ವರೆಗೆ ಉಚಿತ ವಿದ್ಯುತ್ ನೀಡಿದ್ದೇವೆ. ಅದಕ್ಕಾಗಿ 7,436 ಕೋಟಿ ರೂ. ವ್ಯಯಿಸಲಾಗಿದೆ. 1.20 ಕೋಟಿ ಯಜಮಾನಿಯರಿಗೆ ಗೃಹಲಕ್ಷ್ಮಿ ಯೋಜನೆ ತಲುಪಿದೆ. ಯುನಿಧಿಯಡಿ 29,587 ಫಲಾನುಭವಿಗಳಿಗೆ ಹಣ ನೀಡಿದ್ದೇವೆ. ಒಟ್ಟಾರೆ ಪಂಚ ಗ್ಯಾರಂಟಿಗೋಸ್ಕರ 2023-24ರಲ್ಲಿ 36,000 ಕೋಟಿ ರೂ. ಖರ್ಚು ಮಾಡಿದ್ದೇವೆ ಎಂದು ತಿಳಿಸಿದರು.

ವಿರೋಧ ಪಕ್ಷದವರು ಲೋಕಸಭೆ ಚುನಾವಣೆ ಬಳಿಕ ಗ್ಯಾರಂಟಿ ಯೋಜನೆ ನಿಲ್ಲಿಸುತ್ತಾರೆ, ಪ್ರತಿಪಕ್ಷಗಳು ಅಭಿವೃದ್ಧಿ ಕೆಲಸಕ್ಕೆ ದುಡ್ಡಿಲ್ಲ ಎಂದು ಟೀಕೆ ಮಾಡಿದ್ದರು. ಆದರೆ ಯಾವುದೇ ಅಭಿವೃದ್ಧಿ ಕಾರ್ಯಗಳು ನಿಂತಿಲ್ಲ. ಜತೆಗೆ ಯಾವುದೇ ಕಾರಣಕ್ಕೂ ಈ ಐದು ಯೋಜನೆಗಳು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟನೆ ನೀಡಿದರು.

54,374 ಕೋಟಿ ರೂ.ಬಂಡವಾಳ ವೆಚ್ಚ ಮಾಡುತ್ತೇವೆ ಅಂದಿದ್ದೆವು. ನಾವು ಖರ್ಚು ಮಾಡಿದ್ದು 56,274 ಕೋಟಿ ರೂ. ಆಗಿದೆ. ಆ ಮೂಲಕ ಅಭಿವೃದ್ಧಿ ಕೆಲಸವನ್ನೂ ನಿಲ್ಲಿಸಿಲ್ಲ. ನೀರಾವರಿ ಯೋಜನೆಗೆ ನಾವು ಬಜೆಟ್‌ನಲ್ಲಿ 16,371 ಕೋಟಿ ರೂ. ಖರ್ಚು ಮಾಡುವುದಾಗಿ ಹೇಳಿದ್ದೆವು. ಆದರೆ 18,198 ಕೋಟಿ ರೂ. ಖರ್ಚು ಮಾಡಿದ್ದೇವೆ. ಲೋಕೋಪಯೋಗಿ ಇಲಾಖೆಗೆ ಬಜೆಟ್‌ನಲ್ಲಿ 9,722 ಕೋಟಿ ನೀಡಿದ್ದೆವು ಅದರಂತೆ 9,641 ಕೋಟಿ ಖರ್ಚು ಮಾಡಿದ್ದೇವೆ. ನಮ್ಮ ಖಜಾನೆ ಖಾಲಿ ಆಗಿದೆ, ಪಾಪರ್ ಆಗುತ್ತಾರೆ ಅಂದಿದ್ರು. ಪಾಪರ್ ಆಗಿದ್ದರೆ ಇಷ್ಟು ಹಣ ಖರ್ಚು ಮಾಡಲು ಆಗುತಿತ್ತಾ ಸಿಎಂ ಎಂದು ಪ್ರಶ್ನಿಸಿದರು.

ನಂತರ ಮೀಸಲಾತಿ ವಿಷಯ ವಿಚಾರ ಪ್ರಸ್ತಾಪಿಸಿದ ಅವರು, ಮುಸ್ಲಿಮರಿಗೆ 2ಬಿಯಡಿ 4% ಮೀಸಲಾತಿ ನೀಡಲಾಗುತ್ತಿದೆ. ಚಿನ್ನಪ್ಪ ರೆಡ್ಡಿ ಆಯೋಗದಂತೆ 30 ವರ್ಷಗಳಿಂದ ಈ ಮೀಸಲಾತಿ ಜಾರಿಯಲ್ಲಿದೆ. ಈ ಹಿಂದೆ ಬೊಮ್ಮಾಯಿ ಸರ್ಕಾರ ಮುಸ್ಲಿಂ ಮೀಸಲಾತಿ ರದ್ದು ಮಾಡಿತ್ತು.

ಅದರ ವಿರುದ್ಧ ಮುಸ್ಲಿಂರು ಕೋರ್ಟ್‌ಗೆ ಹೋಗಿದ್ದರು. ಕೋರ್ಟ್‌ನಲ್ಲಿ ಬೊಮ್ಮಾಯಿ ಸರ್ಕಾರ ನಾವು ಇದನ್ನು ಜಾರಿ ಮಾಡಲ್ಲ ಎಂದಿದ್ದರು. ಪ್ರಧಾನಿ ಮೋದಿಗೆ ಸಿಎಂ ಪ್ರಶ್ನೆ: ಮುಸ್ಲಿಂಮರಿಗೆ ಹಿಂದುಳಿದ ವರ್ಗದಿಂದ ಕಿತ್ತು ಮೀಸಲಾತಿ ಕೊಟ್ಟಿದ್ದೇವೆ ಎಂದು ಮೋದಿ ಅವರು ಈತರ ಸುಳ್ಳು ಹೇಳಬಾರದು. ನಾವು ಮತ್ತೊಬ್ಬರ ಹಕ್ಕನ್ನು ಕಿತ್ತುಕೊಳ್ಳುವ ಕೆಲಸ ಮಾಡಿಲ್ಲ. ಮತಕ್ಕೋಸ್ಕರ ಈ ರೀತಿ ಏನು ಬೇಕಾದರು ಹೇಳುವುದಲ್ಲ. 10 ವರ್ಷದಿಂದ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾರೆ. ಏನಾದರು ಬಡವರ ಪರ ಕೆಲಸ ಮಾಡಿದ್ದೀರಾ ಎಂದು ಸಿಎಂ ಪ್ರಶ್ನಿಸಿದರು. ಈ ಹಿಂದೆ 40% ಕಮಿಷನ್ ಬಗ್ಗೆ ಬೊಮ್ಮಾಯಿ ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘದ ಅಧ್ಯಕ್ಷರಾದ ಕೆಂಪಣ್ಣ ಆರೋಪ ಮಾಡಿದ್ದರು.



ಲೋಕಸಭಾ ಚುನಾವಣೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿಯವರು ಸೋಮವಾರ ಒಡಿಶಾದಲ್ಲಿ ರೋಡ್ ಶೋ ನಡೆಸಿದರು. ಪ್ರಚಾರ ಸಂದರ್ಭದಲ್ಲಿ ಮೋದಿ ಅವರನ್ನು ನೋಡಲು ಜನತೆ ಜನಸಾಗರದಂತೆ ನೆರೆದಿದ್ದರು...

## ಡಿಸಿಎಂ ಸಿಟಿ ರೌಂಡ್ಸ್

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ಒಂದು ವರ್ಷ ತುಂಬಲಿದ ಹಿನ್ನೆಲೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಗಳೂರು ಸಿಟಿ ರೌಂಡ್ಸ್ ಹಾಕಿದ್ದಾರೆ. ಮಳೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದಾರೆ.

ಜೊತೆಗೆ ಕೆ.ಆರ್ ಪುರ ಸಮೀಪದ ಎನ್ ಜಿಎಫ್ ಬಳಿ ಸ್ಮೈಡೆಕ್ ಸ್ಥಳ ವೀಕ್ಷಣೆ ಮಾಡಿದ್ದು, ಯಾವುದೇ ಮುಲಾಜಿಲ್ಲದೆ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ಮಾಡುತ್ತೇವೆ. ಖಾಸಗಿ ಬಿಲ್ಡರ್ಸ್ ಹಾಗೂ ಭೂ ಮಾಲೀಕರು ಒತ್ತುವರಿ ತೆರವು ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

ಮಳೆ ಹಿನ್ನೆಲೆ ರಾಜಕಾಲುವೆ ಸ್ವಚ್ಛತೆ ಕುರಿತು ಬಿಬಿಎಂಪಿ ಆಯುಕ್ತರಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಪಕ್ಕದ ಸಾಯಿ ಲೇಔಟ್‌ಗೆ ಮಳೆ ನೀರು ನುಗ್ಗುವ ಭೀತಿ ಹಿನ್ನೆಲೆ ಮಳೆ ನೀರು ರಾಜಕಾಲುವೆಗೆ ಕನೆಕ್ಟ್ ಮಾಡಲು ಸೂಚನೆ ನೀಡಿದ್ದಾರೆ. ಇದೇ ವೇಳೆ ಬಿಡಿಎ ಸೈಟ್‌ಗಳಿಗೆ ದಾರಿ ಇಲ್ಲ ಅಂತಾ ಡಿ.ಕೆ.ಶಿವಕುಮಾರ್‌ಗೆ ಬಿಡಿಎ ನಿವಾಸಿಗಳಿಂದ ದೂರು ನೀಡಿದ್ದಾರೆ.

ಅಮೃತಹಳ್ಳಿಯ ರಾಚೇನಹಳ್ಳಿ ಸಮೀಪದಲ್ಲಿರುವ ಜವಹರಲಾಲ್ ನೆಹರು ಅಧ್ಯಯನ ಕೇಂದ್ರಕ್ಕೂ ಶಿವಕುಮಾರ್ ಭೇಟಿ ನೀಡಿದ್ದು, ಪ್ರಗತಿ ಹಂತದಲ್ಲಿರುವ ಕಾಮಗಾರಿ



ವೀಕ್ಷಣೆ ಮಾಡಿದ್ದಾರೆ.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಬೆಂಗಳೂರಿನಲ್ಲಿ ಮಳೆಯಿಂದ ಹಾನಿಯಾಗಿಲ್ಲ, ಆದರೆ ನೀರು ನಿಂತಿದೆ. ಪ್ರೈವೇಟ್ ಲೇಔಟ್ ನಿರ್ಲಕ್ಷ್ಯದಿಂದ ಈ ರೀತಿ ಆಗಿದೆ, ಸರಿಪಡಿಸುತ್ತೇವೆ.

ನಿವಾಸಿಗಳಿಗೆ ಯಾವುದೇ ಸಮಸ್ಯೆ ಆಗದಂತೆ ಸೂಕ್ತ ಕ್ರಮ ಕೈಗೊಳ್ತೇವೆ. ಆದಷ್ಟು ಬೇಗ ರಾಜಕಾಲುವೆ ಕಾಮಗಾರಿ ಮುಗಿಸುತ್ತೇವೆ ಎಂದು ಹೇಳಿದ್ದಾರೆ.

ಮಳೆಯಿಂದ ಸಮಸ್ಯೆ ಆಗದಂತೆ ಎಚ್ಚರ ವಹಿಸಲು ಸೂಚನೆ ನೀಡಿದ್ದೇನೆ. ಲೇಔಟ್ ನಿರ್ಮಿಸಿ ಮೂಲಸೌಕರ್ಯ ಒದಗಿಸದವರಿಗೆ ನೋಟಿಸ್ ನೀಡಲಾಗಿದೆ. ಬಿಡಿಎ ಲೇಔಟ್ ಗಳ ಖಾಸಗೀಕರಣ ಬಿಡಿಎಗೆ ಆದಾಯ ಬೇಕಲ್ವಾ. ವಿರೋಧ ಮಾಡೋರು ಮಾಡಲಿ, ಈ ಹಿಂದೆ ಅದೆಲ್ಲಾ ಆಗಿದೆ. ವ್ಯಾಪಾರಸ್ಥರು, ಅಂಗಡಿ ಮಾಲೀಕರಿಗೆ ಅಲ್ಟರ್ನೇಟಿವ್ ವ್ಯವಸ್ಥೆ ಮಾಡ್ತೇವೆ ಎಂದಿದ್ದಾರೆ.

## ಪ್ರಜ್ವಲ್ ವಾಪಸ್ ಬಾರಪ್ಪ: ಎಚ್‌ಡಿಕೆ

ಬೆಂಗಳೂರು: ಪ್ರಜ್ವಲ್, ನೀನು ಎಲ್ಲೇ ಇದ್ದರೂ ಕೂಡಲೇ ವಾಪಸ್ ಬಾ.. ತನಿಖಾ ತಂಡಕ್ಕೆ ಸಹಕಾರ ನೀಡು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮಾಧ್ಯಮಗಳ ಮೂಲಕ ಪ್ರಜ್ವಲ್ ರೇವಣ್ಣ ಅವರಿಗೆ ಸಂದೇಶ ನೀಡಿದರು. ನಮ್ಮ ತಂದೆ ಆವರಿಗೆ ನಾನು ಹೇಳಿದ್ದೇನೆ.

ಈ ಸರಕಾರಕ್ಕೆ ಪ್ರಜ್ವಲ್ ಕರೆಸುವ ಶಕ್ತಿ ಇದ್ದಂತಿಲ್ಲ. ಅದಕ್ಕೆ ನಾನೇ ಕರೆ ಕೊಡುತ್ತಿದ್ದೇನೆ. ಮಾಧ್ಯಮಗಳ ಮೂಲಕ ಹೇಳುತ್ತಿದ್ದೇನೆ. ಕೂಡಲೇ ವಾಪಸ್ ಬಾ.. ದೊಡ್ಡವರು (ದೇವೇಗೌಡರು) ಮತ್ತು ಪಕ್ಷದ ಕಾರ್ಯಕರ್ತರಿಗೆ ಗೌರವ ಕೊಟ್ಟು ತಕ್ಷಣ ವಾಪಸ್ ಬಾ.. ತನಿಖಾ ತಂಡಕ್ಕೆ ಸಹಕರಿಸು. ಕಾನೂನು ಪ್ರಕಾರ ಪ್ರಕರಣವನ್ನು ಎದುರಿಸು ಎಂದು ಹೇಳಿದರು ಮಾಜಿ ಮುಖ್ಯಮಂತ್ರಿಗಳು.

ನಮ್ಮ ತಂದೆಯವರ ನೋವು ನೋಡಲಾಗದೆ ಈ ಮಾತನ್ನು ಹೇಳುತ್ತಿದ್ದೇನೆ. ಇತರೆ ಯಾರೂ ನಮ್ಮಿಂದ ನೋವಿಗೆ ತುತ್ತಾಗಬಾರದು. ನಾನೇ ಮಾಧ್ಯಮಗಳ ಮೂಲಕ ಮನವಿ ಮಾಡುತ್ತೇನೆ ಎಂದು ತಂದೆಯವರು ಹೇಳಿದರು. ನಾನೇ ವಾಪಸ್ ಬರುವಂತೆ ಸಂದೇಶ ಕೊಡುತ್ತೇನೆ ಎಂದು ನಿಮ್ಮಗಳ (ಮಾಧ್ಯಮಗಳು) ಮೂಲಕ ಬಹಿರಂಗವಾಗಿ ಹೇಳುತ್ತದ್ದೇನೆ ಎಂದರು ಕುಮಾರಸ್ವಾಮಿ ಅವರು.

ನಾನು ದಿನವೂ ಪದ್ಮನಾಭ ನಗರಕ್ಕೆ ಹೋಗುತ್ತೇನೆ. ಪ್ರಜ್ವಲ್ ರಕ್ಷಣೆ ಹೇಗೆ ಮಾಡಬೇಕು ಎಂದು ಚರ್ಚೆ ಮಾಡುವುದಕ್ಕೆ ನಾನು ಅಲ್ಲಿಗೆ ಹೋಗುತ್ತಿಲ್ಲ. ನಮ್ಮ ತಂದೆ-ತಾಯಿ ಅವರ ಜೀವಕ್ಕೆ ತೊಂದರೆ ಆಗಬಾರದು ಎಂದು ಅವರಿಗೆ ಧೈರ್ಯ ತುಂಬಲು ಹೋಗುತ್ತಿದ್ದೇನೆ. ಆದರೆ, ಇದನ್ನೇ ಬೇರೆಯವರು ಕಥೆ ಕಟ್ಟಿ ಹೇಳುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಬೇಸರ ವ್ಯಕ್ತಪಡಿಸಿದರು.

## ರೇವ್ ಪಾರ್ಟಿ ಮೇಲೆ ದಾಳಿ

ಬೆಂಗಳೂರು: ನಗರದ ಎಲೆಕ್ಟ್ರಾನಿಕ್ ಸಿಟಿ ಹೊರಭಾಗದ ಸಿಂಗೇನಾ ಅಗ್ರಹಾರದ ಫಾರಂ ಹೌಸ್‌ನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದು, ಅಪಾರ ಪ್ರಮಾಣದ ಮಾದಕ ವಸ್ತುಗಳು ಪತ್ತೆಯಾಗಿವೆ. ಪಾರ್ಟಿಯಲ್ಲಿ ತೆಲುಗು ನಟ-ನಟಿಯರು, ಮಾಡೆಲ್‌ಗಳು ಹಾಗೂ ಟೆಕ್ಕಿಗಳು ಭಾಗಿಯಾಗಿದ್ದರು ಎಂದು ತಿಳಿದು ಬಂದಿದೆ.

ಕಾನ್ ಕಾರ್ಡ್ ಮಾಲೀಕ ಗೋಪಾಲ ರೆಡ್ಡಿ ಎಂಬವರಿಗೆ ಸೇರಿದ ಜಿ.ಆರ್ ಫಾರಂ ಹೌಸ್‌ನಲ್ಲಿ ಹೈದರಾಬಾದ್ ಮೂಲದ ವಾಸು ಎಂಬಾತ ರೇವ್ ಪಾರ್ಟಿ ಆಯೋಜಿಸಿದ್ದ. ಪಾರ್ಟಿಯಲ್ಲಿ ಆಂಧ್ರಪ್ರದೇಶ ಹಾಗೂ ಬೆಂಗಳೂರು ಮೂಲದ 100ಕ್ಕೂ ಅಧಿಕ ಮಂದಿ ಯುವಕ ಯುವತಿಯರಿದ್ದರು. ಖಚಿತ ಮಾಹಿತಿ ಆಧರಿಸಿ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಅವಧಿ ಮೀರಿ ಪಾರ್ಟಿ ನಡೆದಿದ್ದಲ್ಲದೇ ಪಾರ್ಟಿಯಲ್ಲಿ ಎಂಡಿಎಂಎ, ಕೋಕೆನ್ ಸೇರಿ ಹಲವು ಮಾದರಿಯ ಮಾದಕ ವಸ್ತುಗಳು ಪತ್ತೆಯಾಗಿವೆ.

ಸ್ಥಳದಲ್ಲಿದ್ದ ಬೆಂಜ್ ಕಾರಿನಲ್ಲಿ ಆಂಧ್ರದ ಎಂಎಲ್‌ಎ ಕಾಕನಿ ಗೋವರ್ಧನ ರೆಡ್ಡಿ ಎಂಬವರ ಹೆಸರಿನ ಪಾಸ್ ಪತ್ತೆಯಾಗಿದೆ. ಪಾರ್ಟಿಗೆ ಯುವಕರು ಜಾಗ್ವಾರ್ ಹಾಗೂ ಆಡಿ ಕಾರುಗಳಲ್ಲಿ ಬಂದಿದ್ದು, ಕೆಲವರನ್ನು ಹೈದರಾಬಾದ್‌ನಿಂದ ಕರೆಸಿಕೊಳ್ಳಲಾಗಿತ್ತು. ಸನ್ ಸೆಟ್ ಟು ಸನ್ ರೈಸ್ ಪಾರ್ಟಿ ಎಂಬ ಹೆಸರಿನಲ್ಲಿ ಪಾರ್ಟಿ ಆಯೋಜಿಸಲಾಗಿದ್ದು, ನಿನ್ನೆ ಸಂಜೆ 5 ಗಂಟೆಯಿಂದ ಇಂದು ಬೆಳಗ್ಗೆ 6 ಗಂಟೆ ವರೆಗೂ ಪಾರ್ಟಿ ನಡೆಸಲು ಮುಂದಾಗಿದ್ದರು.

ಪಾರ್ಟಿಗೆ ಸುಮಾರು 30 ರಿಂದ 50 ಲಕ್ಷ ರೂ. ಹಣ ಖರ್ಚು ಮಾಡಲಾಗಿದೆ ಎಂದು ತಿಳಿದು ಬಂದಿದೆ.

## ಸರ್ಕಾರದ ಅಭಿವೃದ್ಧಿ ಶೂನ್ಯ: ಸಿದ್ದರಾಮಯ್ಯ ರಾಜೀನಾಮೆ ನೀಡಲಿ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಒಂದು ವರ್ಷದಲ್ಲಿ ಖಜಾನೆಯನ್ನು ಸಂಪೂರ್ಣ ಖಾಲಿ ಮಾಡಿದೆ. ರಾಜ್ಯ ಕೊಲೆಗಡುಕರ ಸ್ವರ್ಗವಾಗಿ ಬದಲಾಗಿದೆ. ಇಂತಹ ಶೂನ್ಯ ಸಾಧನೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು. ರಾಜ್ಯಪಾಲರು ಈ ಸರ್ಕಾರವನ್ನು ವಜಾ ಮಾಡಬೇಕು ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರ್ಕಾರದ ಅವಧಿ ಮುಗಿಯತೆಂಬ ಕಾರಣಕ್ಕೆ ಜನರಿಗೆ ಧನ್ಯವಾದ




ತಿಳಿಸಿದ್ದಾರೆಯೋ ಅಥವಾ ಕಾನೂನು ಸುವ್ಯವಸ್ಥೆ ಹಾಳು ಮಾಡಿರುವ ಕೊಲೆಗಾರರಿಗೆ ಧನ್ಯವಾದ ಹೇಳಿದ್ದಾರೆಯೋ ಗೊತ್ತಿಲ್ಲ. ನೇಹಾ, ಅಂಜಲಿ ಕೊಲೆಯಾದರು. ಇನ್ನು ಯಾವ ಹೆಣ್ಣುಮಕ್ಕಳು ಕೊಲೆಯಾಗುತ್ತಾರೆ ಎಂಬ ಆತಂಕವಿದೆ. ಹೆಣ್ಣುಮಕ್ಕಳು ಕಾಲೇಜಿಗೆ ಹೋದರೆ ಗ್ಯಾರಂಟಿ ಇಲ್ಲ, ಮನೆಯಿಂದ ಆಚೆಬಂದರೆ ಗ್ಯಾರಂಟಿ ಇಲ್ಲ. ಸರ್ಕಾರ ಎಷ್ಟು ಉಚಿತ ನೀಡಿದರೂ ಬದುಕುವ ಗ್ಯಾರಂಟಿಯೇ ಇಲ್ಲ ಎಂದು ಟೀಕಿಸಿದರು.

ಅಂಜಲಿಯ ಕೊಲೆಯ ಹಿಂದೆ ಪೊಲೀಸರ ಲೋಪವಿದೆ ಎಂದು ಗೃಹ ಸಚಿವರೇ ಹೇಳಿದ್ದಾರೆ ಎಂದ ಮೇಲೆ ಸರ್ಕಾರ ಯಾಕೆ ಬದುಕಿರಬೇಕು? ಹಿಂದೂಗಳ ಮಾರಣಹೋಮವಾದರೂ ಇಲ್ಲಿ ಕೇಳುವವರಿಲ್ಲ. ಬೆಂಗಳೂರಿನಲ್ಲಿ ಮುಸ್ಲಿಮರು ಪೊಲೀಸ್ ಠಾಣೆಗೆ ಹೋಗಿ ಕಪಾಳಮೋಕ್ಷ ಮಾಡುವ ಸ್ಥಿತಿಯಿದೆ. ಕೊಲೆಗಾರರನ್ನು ನೇಣಿಗೇರಿಸುವ ಬದಲು ಈ ಸರ್ಕಾರವನ್ನೇ ನೇಣಿಗೇರಿಸಬೇಕು. ಈ ಸರ್ಕಾರ ಬಂದ ನಂತರ ವಿಧಾನಸೌಧದಲ್ಲೇ ಪಾಕಿಸ್ತಾನ ಜಿಂದಾಬಾದ್ ಹೇಳಲು ಅನುಮತಿ ಸಿಕ್ಕಿದೆ. ಹನುಮಾನ್ ಚಾಲೀಸ ಕೇಳಿದರೆ, ಜೈ ಶ್ರೀರಾಮ್ ಎಂದರೆ ಹಲ್ಲೆಯಾಗುತ್ತದೆ ಎಂದು ದೂರಿದರು.

ಒಂದು ವರ್ಷದಲ್ಲಿ ಮಗು ಅಂಬೆಗಾಲಿಡುತ್ತದೆ. ಆದರೆ ಸರ್ಕಾರ ಇನ್ನೂ ಟೇಕಾಫ್ ಆಗಿಲ್ಲ. ರಸ್ತೆ, ನೀರಾವರಿ, ಸೇತುವೆ ಸೇರಿದಂತೆ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ. ಶಾಲೆ ಕಟ್ಟಡ ದುರಸ್ತಿಗೂ ಹಣವಿಲ್ಲ.

ಬಸ್ ಚಾಲಕರಿಗೆ, ಆಂಬ್ಯುಲೆನ್ಸ್ ಚಾಲಕರಿಗೆ ಸಂಬಳವಿಲ್ಲ, ರೈತರಿಗೆ ಹಾಲಿನ ಪ್ರೋತ್ಸಾಹಧನ ಸಿಕ್ಕಿಲ್ಲ. ರಾಜ್ಯದ ಆರ್ಥಿಕ ಸ್ಥಿತಿ ವೆಂಟಿಲೇಟರ್‌ನಲ್ಲಿದೆ. ಸಿಎಂ ಸಿದ್ದರಾಮಯ್ಯನವರು 15 ಬಜೆಟ್ ಮಂಡಿಸಿ ಒಂದೂವರೆ ಲಕ್ಷ ಕೋಟಿ ರೂ. ಸಾಲ ಮಾಡಿದ್ದಾರೆ ಎಂದು ದೂರಿದರು.

ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjaneevartheepaper.com

# ಪಿಎಸ್ಐ ಸಂಜೀವ ತಿಪರೆಡ್ಡಿ ದಂಡದ ಬಿಸಿ

ಮುದ್ದೇಬಿಹಾಳ: ಹೆಲ್ಮೆಟ್ ಇಲ್ಲದೇ ದ್ವಿಚಕ್ರ ವಾಹನ ಸವಾರಿ ಸೇರಿದಂತೆ ಸಂಚಾರಿ ನಿಯಮ ಪಾಲಿಸದ ವಾಹನ ಸವಾರರಿಗೆ ಇಲ್ಲಿನ ಪಿಎಸ್ಐ ಸಂಜೀವ ತಿಪರೆಡ್ಡಿ ದಂಡದ ಮತ್ತು ಪ್ರಕರಣದ ಬಿಸಿ ಮುಟ್ಟಿಸಿದರು.

ಸೋಮುವಾರ ಬೆಳಿಗ್ಗೆಯಿಂದಲೇ ಖುದ್ದು ತಾವೇ ಪ್ರಮುಖ ರಸ್ತೆಗಳಲ್ಲಿ ನಿಂತು ಸುಮಾರು 80 ಕ್ಕೂ ಹೆಚ್ಚು ವಾಹನಗಳ ದಾಖಲೆಗಳನ್ನು ಪರಿಶೀಲಿಸಿದರು. ನಂಬರ್ ಪ್ಲೇಟ್ ಮೇಲೆ ಬರೆಸಲಾದ ಚಿತ್ರ ವಿಚಿತ್ರ ಸಂದೇಶಗಳನ್ನು ಕಿತ್ತಿಸಿದರು. ಆರ್.ಸಿ ಪುಸ್ತಕ, ಚಾಲನಾ ಪರವಾನಗೆ, ವಿಮೆ ಸೇರಿದಂತೆ ಅಗತ್ಯ ದಾಖಲೆಗಳನ್ನು ಪರಿಶೀಲಿಸಿ ದಾಖಲೆಗಳನ್ನು ನೀಡದವರ ಮೇಲೆ ಪ್ರಕರಣ ದಾಖಲಿಸಿದರು.




ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಸವಾರಿ ಮಾಡಬೇಕು. ಸುರಕ್ಷತಾ ನಿಯಮಗಳನ್ನು ತಪ್ಪದೇ ಪಾಲಿಸಬೇಕು. ಬಹಳ ಜನರು ಅಪ್ರಾಪ್ತ ವಯಸ್ಕರಿಗೆ ತಮ್ಮ ವಾಹನಗಳನ್ನು ಕೊಡುತ್ತಿದ್ದಾರೆ. ಇದು ನಿಯಮಬಾಹಿರ, ಬಿಸಿ ರಕ್ತದ ಪಡ್ಡೆ ಹುಡುಗರು ಯಾವ ನಿಯಮವನ್ನೂ ಪಾಲಿಸದೇ ಎಲ್ಲಂದರಲ್ಲಿ ಅತೀ ವೇಗವಾಗಿ ವಾಹನ ಚಲಾಯಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಯಾರೂ ಕೂಡ ತಮ್ಮ ವಾಹನಗಳನ್ನು ಅಪ್ರಾಪ್ತರ ಕೈಗೆ ಕೊಡಕೂಡದು. ಸಂಚಾರಿ ನಿಯಮಗಳ ಉಲ್ಲಂಘನೆಯಾದಲ್ಲಿ ಮುಲಾಜಿಲ್ಲದೇ ಸೂಕ್ತ ಕ್ರಮ ಕೈಗೊಳ್ಳುವದಾಗಿ ಎಚ್ಚರಿಸಿದರು.

ಬಸವೇಶ್ವರ ವೃತ್ತದದಲ್ಲಿ ಪರಿಶೀಲನೆ ಕಾರ್ಯಾಚರಣೆ ಕೈಗೊಂಡಿದ್ದರೆ ಬಸ್ ಇಲ್ದಾಣದ ಬಳಿ ಅದೆಷ್ಟೋ ವಾಹನಗಳು ತಮ್ಮ ಸವಾರಿಯ ದಿಕ್ಕನ್ನು ಬದಲಾಯಿಸಿದ್ದವು. ಈ ಪರಿಶೀಲನೆ ಕಾರ್ಯಾಚರಣೆ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.

ಈ ವೇಳೆ ಎಎಸ್ಐಗಳಾದ ಬಿ.ಜೆ.ಕಾಸರ, ಕೆ.ಎಸ್.ಅಸ್ಕಿ, ಎಂ.ಪಿ.ಹೋಕಳೆ, ಡಿ.ಎಚ್.ಬಾಗೇವಾಡಿ, ಬಿ.ಡಿ.ಪವಾರ ಮತ್ತು ಸಿಬ್ಬಂದಿಗಳಾದ ಅರುಣ ಯಾಳವಾರ, ಮಲ್ಲನಗೌಡ ಬಿರಾದಾರ, ಸಿ.ಎಸ್.ಬಿರಾದಾರ, ಚಿದಾನಂದ ಸುರಗಿಹಳ್ಳಿ, ಶಿವರಾಜ ನಾಗರೆಡ್ಡಿ, ಎಂ.ಬಿ.ಮುಳವಾಡ ಇದ್ದರು.

## ಮೇಕೆ ಮೇಲೆ ಎರಗಿದ ಹೆಬ್ಬಾವು .. ಅರಣ್ಯ ಇಲಾಖೆಯಿಂದ ಹೆಬ್ಬಾವು ರಕ್ಷಣೆ..

ಕೊರಟಗೆರೆ:-ಮೇಕೆಯನ್ನ ಬೇಟೆಯಾಡಿ ಮೇಕೆಯನ್ನು ಸುತ್ತಿಕೊಂಡಿದ್ದ ಹೆಬ್ಬಾವನ್ನು ಸಾರ್ವಜನಿಕರು ಕಂಡು ಮೇಕೆಯನ್ನ ಬಿಡಿಸಿದ ನಂತರ ಕತ್ತಾಳೆ ಪದೇಗೆ ಹೋಗಿ ಸಿಲುಕಿದ ಹೆಬ್ಬಾವನ್ನು ಅರಣ್ಯ ಇಲಾಖೆ ಹಾಗೂ ಉರಗ ತಜ್ಞರಿಂದ ಸೆರೆಹಿಡಿದು ರಕ್ಷಣೆ ಮಾಡಿದ ಘಟನೆ ಕೊರಟಗೆರೆ ತಾಲೂಕಿನಲ್ಲಿ ಜರುಗಿರೆ.

ಕೊರಟಗೆರೆ ತಾಲೂಕಿನ ತೋವಿನಕೆರೆ ಹೋಬಳಿ ಮಣ್ಣಿನಕುರಿಕೆ ಗ್ರಾಮದಲ್ಲಿ ಮೇಕೆ ಬೇಟೆಯಾಡಿದ ಹೆಬ್ಬಾವನ್ನ ಸಾರ್ವಜನಿಕರು ಬಿಡಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಬಳಿಕ ಅರಣ್ಯ ಇಲಾಖೆ ಸಿಬ್ಬಂದಿ ಉರುಗ ತಜ್ಞರೊಂದಿಗೆ ಆಗಮಿಸಿ ಸೆರೆ ಹಿಡಿದಿದ್ದಾರೆ.

ಕಳೆದ ಆರು ತಿಂಗಳುಗಳ ಹಿಂದೆ ಇದೇ ಗ್ರಾಮದಲ್ಲಿ ಮೇಕೆ ಕಾಯುತ್ತಿದ್ದ ಹುಡುಗನ ಮೇಲೆ ಹೆಬ್ಬಾವು ದಾಳಿ ನಡೆಸಿ ಆತ ಅದೃಷ್ಟವಶಾತ್ ತಪ್ಪಿಸಿಕೊಂಡ ನಂತರ ಮೇಕೆ ಮೇಲೆ ದಾಳಿ ನಡೆಸಿ ಸಾಯಿಸಿದ ಘಟನೆಯ ಕೆಲವೇ ತಿಂಗಳುಗಳಲ್ಲಿ ಮತ್ತೆ ಹೆಬ್ಬಾವು ಕಾಣಿಸಿಕೊಂಡಿರುವುದು ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ.

ಈ ಹಿಂದೆ ಹೆಬ್ಬಾವು ದಾಳಿಗೆ ಸಿಲುಕಿ ಸಾವಿಗೀಡಾದ ಮೇಕೆ ಗೆ ಯಾವುದೇ ಪರಿಹಾರ ನೀಡದ ಅರಣ್ಯ ಇಲಾಖೆಯ ವಿರುದ್ಧ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.





ಚಿಕ್ಕಬಳ್ಳಾಪುರ: ನಗರದ ಬಿಬಿ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಶನಿವಾರ ಮಾಜಿ ಪ್ರಧನಿ ಹೆಚ್.ಡಿ.ದೇವೇಗೌರವರ 92ನೇ ಹುಟ್ಟುಹಬ್ಬನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಬಾಲಕುಂಟಹಳ್ಳಿ ಮುನಿಯಪ್ಪ, ಕೆ.ಆರ್.ರೆಡ್ಡಿ, ಪ್ರಭಾ ನಾರಾಯಣಗೌಡ, ಶ್ರೀನಾಥ್, ಪಾರಿಜಾತ, ಕೆ.ಬಿ.ಮುನಿರಾಜು, ಕಿಸಾನ್ ಕೃಷ್ಣಪ್ಪ, ಶ್ರೀನಿವಾಸ್, ವಕೀಲರಾದ ಮಟಮಪ್ಪ, ಮತ್ತಿತರರು ಪಾಲ್ಗೊಂಡಿದ್ದರು.

# ಅಂಜಲಿ ಹತ್ಯೆ ಖಂಡಿಸಿ: ಬಿಜೆಪಿಯಿಂದ ಪ್ರತಿಭಟನೆ




ಶಿವಮೊಗ್ಗ: ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆ ಖಂಡಿಸಿ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಇಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿತು.

ಅಂಜಲಿ ಹತ್ಯೆ ಅತ್ಯಂತ ಕ್ರೂರವಾದುದು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಇಡೀ ರಾಜ್ಯಾದ್ಯಂತ ಹೆಣ್ಣು ಮಕ್ಕಳ ಸರಣಿ ಕೊಲೆಗಳಾಗುತ್ತಿವೆ. ಕಾನೂನು ಸುವ್ಯವಸ್ಥೆ ಕುಸಿದುಬಿದ್ದಿದೆ. ಈ ಹಿಂದೆ ಹುಬ್ಬಳ್ಳಿಯ ನೇಹಾ, ಮಡಿಕೇರಿಯ ಮೀನಾ, ಹತ್ಯೆಯಾಗಿತ್ತು. ಅದೇ ರೀತಿ ಈಗ ಅಂಜಲಿ ಕೊಲೆಯಾಗಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಕೊಲೆಗಡುಕರಿಗೆ ಹೆದರಿಕೆ ಇಲ್ಲದಂತಾಗಿದೆ ಎಂದು ದೂರಿದರು. ಈ ಪ್ರಕರಣದ ಬಗ್ಗೆ ತ್ವರಿತಗತಿಯಲ್ಲಿ ವಿಚಾರಣೆ ನಡೆಸಬೇಕು. ಆರೋಪಿಯನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು. ಇಂತಹ ಘಟನೆ ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು. ಶೀಘ್ರವೇ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಹೋರಾಟ ನಡೆಸಲಾಗುವುದು ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

ಈ ಸಂದರ್ಭದಲ್ಲಿ ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಗಾಯತ್ರಿದೇವಿ ಮಲ್ಲಪ್ಪ, ಪ್ರಮುಖರಾದ ಮಂಗಳಾ ನಾಗೇಂದ್ರ, ಜ್ಯೋತಿ ರಘು, ಯಶೋದಾ, ರಶ್ಮಿ ಶ್ರೀನಿವಾಸ್, ಸುರೇಖಾ ಪಾಲಾಕ್ಷಪ್ಪ, ಸುಮಿತ್ರಾ ಇದ್ದರು.

# ಸಿಲಿಂಡರ್ ಸ್ಫೋಟ; ಗಾಯಗೊಂಡವರ ಆರೋಗ್ಯ ವಿಚಾರಿಸಿದ ಶಾಸಕ

ಕುಣಿಗಲ್: ಪಟ್ಟಣದ ಸಂತೆಬೀದಿಯಲ್ಲಿ ಇರುವ ರವಿಕುಮಾರ್ ಎಂಬುವವರ ಮನೆಯಲ್ಲಿ ಸಂಜೆ ಅಡುಗೆ ಮಾಡುವ ಸಂದರ್ಭದಲ್ಲಿ ಸಿಲಿಂಡರ್ ಸ್ಫೋಟಿಸಿ ಹಲವರು ಗಾಯಗೊಂಡ ಘಟನೆ ನಡೆದಿದೆ.

ಮಾಹಿತಿ ಹಿನ್ನೆಲೆ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದಾರೆ. ಸಿಲಿಂಡರ್ ಸ್ಫೋಟದ ತೀವ್ರತೆಗೆ ಮನೆಯಲ್ಲಿದ್ದ ದಿನಸಿ ಸಾಮಗ್ರಿ ಹಾಗೂ ಕಿಟಕಿ ಬಾಗಿಲುಗಳು ಛಿದ್ರಗೊಂಡಿದೆ ಗೊಡೆಗಳು ಬಿರುಕು ಬಿಟ್ಟಿದೆ.

ಘಟನೆಯಲ್ಲಿ ಮನೆಯಲ್ಲಿದ್ದ ರವಿಕುಮಾರ್ ಪತ್ನಿ ಶೃತಿ(45) ಮಕ್ಕಳಾದ ಕುಶಾಲ್ (11) ಹೇಮಲತಾ(16) ಗಂಭೀರ ಗಾಯಗಳಾಗಿದೆ.

ಸಿಲಿಂಡರ್ ಸ್ಫೋಟದ ಶಬ್ದ ಕೇಳಿ ಮನೆಯೊಳಗೆ ಬಂದ ಪಕ್ಕದ ಮನೆಯ ಮಂಜಮ್ಮ(42) ಶಿವಣ್ಣ(45) ಸಮೀನಾ(46) ಎಂಬುವವರಿಗೂ ಬೆಂಕಿ ತಗುಲಿ ಗಂಭೀರ ಗಾಯಗಳಾಗಿದ್ದು ಗಾಯಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಘಟನೆಗೆ ಸಂಬಂಧ ಸ್ಥಳಕ್ಕೆ ಕುಣಿಗಲ್ ಉಪ ವಿಭಾಗದ ಡಿವೈಎಸ್ಪಿ ಓಂ ಪ್ರಕಾಶ್, ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈ ವೇಳೆ ಅಗ್ನಿಶಾಮಕ ಅಧಿಕಾರಿಗಳಾದ ಕೆಂಪರಾಜು, ಭೀಮನಗೌಡ, ಚೇತನ್, ಮಂಜುನಾಥ್, ರಾಜೇಶೇಖರ್ ಹಾಜರಿದ್ದರು.



ಆಸ್ಪತ್ರೆಗೆ ಶಾಸಕ ಡಾ, ರಂಗನಾಥ್ ಭೇಟಿ
ಸಿಲಿಂಡರ್ ಸ್ಫೋಟಗೊಂಡು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿರುವ ಗಾಯಾಳುಗಳ ಬಗ್ಗೆ ಮಾಹಿತಿ ತಿಳಿದು ಕುಣಿಗಲ್ ಶಾಸಕ ಡಾ, ರಂಗನಾಥ್, ಗುರುವಾರ ರಾತ್ರಿ ಗಾಯಗೊಂಡವರನ್ನು ಬೇಟಿಯಾಗಿ ಆರೋಗ್ಯ ವಿಚಾರಿಸಿದ್ದಾರೆ ಬಳಿಕ ವೈದ್ಯರಿಂದ ಮಾಹಿತಿ ಪಡೆದು ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿ ಕುಟುಂಬಸ್ಥರಿಗೆ ಧೈರ್ಯ ತುಂಬಿದ್ದಾರೆ.

## 22ರಂದು ಕುಂದು ಕೊರತೆಗಳ ಸಭೆ

ಚಿಕ್ಕಬಳ್ಳಾಪುರ: ಜಿಲ್ಲೆಯ ಕರ್ನಾಟಕ ಲೋಕಾಯುಕ್ತ, ಪೊಲೀಸ್ ಅಧೀಕ್ಷಕರು ಅವರು ಬಾಗೇಪಲ್ಲಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಕುಂದು ಕೊರತೆಗಳ ಸಭೆಯನ್ನು ಮೇ 22 ರಂದು ಬೆಳಿಗ್ಗೆ 11:00 ಗಂಟೆಗೆ ಬಾಗೇಪಲ್ಲಿ ತಾಲ್ಲೂಕು ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡದೆ ವಿಳಂಬ/ನಿರ್ಲಕ್ಷ್ಯ ಮಾಡುತ್ತಿದ್ದಲ್ಲಿ ಮತ್ತು ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ಅಕ್ರಮಗಳನ್ನು ನಡೆಸಿ ಹಣ ದುರುಪಯೋಗಪಡಿಸಿದ್ದಲ್ಲಿ ಆ ಬಗ್ಗೆ ಸಾರ್ವಜನಿಕರು ನಿರ್ದಿಷ್ಟ ಮಾಹಿತಿಯೊಂದಿಗೆ ಸದರಿ ಸಭೆಗೆ ಹಾಜರಾಗಿ ಅವರ ದೂರು ಅರ್ಜಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ನೀಡಬಹುದೆಂದು ಚಿಕ್ಕಬಳ್ಳಾಪುರ ಜಿಲ್ಲೆಯ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಡಾ. ರಾಮ್ ಎಲ್ ಅರಸಿದ್ದಿ ಅವರು ತಿಳಿಸಿದ್ದಾರೆ.

## ರಕ್ತದೊತ್ತಡ ನಿಯಂತ್ರಣದಲ್ಲಿರಿಸಲು ಕಾಳಜಿ ವಹಿಸಿ

ಬಳ್ಳಾರಿ: ಮಾನವನ ದೇಹದ ರಕ್ತ ನಾಳಗಳಲ್ಲಿ ಹರಿಯುವ ರಕ್ತವು ಸಾಮಾನ್ಯಕ್ಕಿಂತ ಅಧಿಕ ಒತ್ತಡದಲ್ಲಿ ಚಲಿಸುವ ಕ್ರಿಯೆಗೆ ಅಧಿಕ ರಕ್ತದೊತ್ತಡ ಎಂದು ಹೇಳಲಾಗುತ್ತಿದ್ದು, ಹಲವು ಕ್ರಿಯೆಗಳಿಂದ ರಕ್ತದೊತ್ತಡವನ್ನು ಹತೋಟಿಯಲ್ಲಿರಿಸಿಕೊಂಡು ಪ್ರತಿಯೊಬ್ಬರೂ ಕಾಳಜಿ ವಹಿಸಬೇಕು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ ವಿ.ಕೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ರೂಪನಗುಡಿ ಸಮುದಾಯ ಆರೋಗ್ಯ ಕೇಂದ್ರ ವ್ಯಾಪ್ತಿಯ ಇಬ್ರಾಹಿಂಪುರ ಗ್ರಾಮದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ರಕ್ತದೊತ್ತಡ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಾನವನಿಗೆ ಅತಿಯಾಗಿ ಬೊಜ್ಜು ಬರುವುದರಿಂದ ಮತ್ತು ಹೆಚ್ಚಿನ ತೂಕದಿಂದ ರಕ್ತದೊತ್ತಡ ಬರುತ್ತದೆ. ಅದೇರೀತಿಯಾಗಿ ಅತಿಯಾದ ಉಪ್ಪಿನ ಅಂಶವಿರುವ ಆಹಾರ ಸೇವನೆ, ಧೂಮಪಾನ ಮತ್ತು ಮದ್ಯಪಾನ ಮಾಡುವುದರಿಂದ ಅಧಿಕ ರಕ್ತದೊತ್ತಡ ಬರುತ್ತದೆ ಎಂದು ತಿಳಿಸಿದರು.

ಬಳಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸಾರ್ವಜನಿಕರಿಗೂ ಆರೋಗ್ಯ ತಪಾಸಣೆ ಮಾಡಲಾಯಿತು. ಜಿಲ್ಲಾ ಎನ್‌ಸಿಡಿ ಸಂಯೋಜಕರಾದ ಡಾ.ಜಬಿನ್ ತಾಜ್, ರೂಪನಗುಡಿ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಚಿತ್ರಾ ವರ್ಣೇಕರ್, ಹೆಚ್‌ಐಓ ವೈ.ವೀರಾರೆಡ್ಡಿ, ತಾರಾನಾಥ ಆಯುರ್ವೇದಿಕ್ ಆಸ್ಪತ್ರೆಯ ಆಯುಷ್ ವೈದ್ಯಾಧಿಕಾರಿ ತಿಪ್ಪೇಸ್ವಾಮಿ, ದುರುಗಪ್ಪ ಸೇರಿದಂತೆ ರೂಪನಗುಡಿ ಸಮುದಾಯ ಆರೋಗ್ಯ ಕೇಂದ್ರ ಸಿಬ್ಬಂದಿ ವರ್ಗದವರು, ಆಶಾ ಕಾರ್ಯಕರ್ತೆಯರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

# ಬರ ಪರಿಹಾರ ಹಣ ಬಿಡುಗಡೆ: ಜಿಲ್ಲಾಧಿಕಾರಿ ಮಿಶ್ರಾ

ಬಳ್ಳಾರಿ: ಜಿಲ್ಲೆಯನ್ನು ಬರಗಾಲ ಬರಪೀಡಿತ ಎಂದು ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಜಿಲ್ಲೆಯ 36,944 ರೈತರ ಖಾತೆಗೆ ಎರಡು ಹಂತಗಳಲ್ಲಿ ಡಿಬಿಟಿ ಮೂಲಕ ಒಟ್ಟು 41.40 ಕೋಟಿ ರೂ.ಗಳನ್ನು ಜಮೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ. 2023-24 ಸಾಲಿನ ಮುಂಗಾರು ಹಂಗಾಮಿನಲ್ಲಿ ಜಿಲ್ಲೆಯ ಎಲ್ಲಾ 05 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಸರ್ಕಾವು ಘೋಷಣೆ ಮಾಡಿದೆ. ಮುಂಗಾರು ಹಂಗಾಮಿನಲ್ಲಿ ಹಾನಿಯಾಗಿರುವ ಬೆಳೆಗಳಿಗೆ ಬೆಳೆ ಸಮೀಕ್ಷೆ ದತ್ತಾಂಶದ ಮಾಹಿತಿಯ ಆಧಾರದ ಮೇರೆಗೆ ಫ್ರೂಟ್ಸ್ ಐಡಿ ಹೊಂದಿರುವ, ಪಹಣಿ ಜೋಡಣೆಯಾಗಿರುವ ರೈತರಿಗೆ ಡಿಬಿಟಿ ಮೂಲಕ ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಈಗಾಗಲೇ 9 ಕಂತುಗಳಲ್ಲಿ ಮೊದಲನೆ ಕಂತಾಗಿ ಗರಿಷ್ಠ ರೂ.2000 ರವರೆಗೆ ಒಟ್ಟು 36,944 ರೈತರಿಗೆ ರೂ.7.26 ಕೊಟಿ ಪರಿಹಾರ ಬೆಳೆ ಹಾನಿ ಪರಿಹಾರವನ್ನು ವಿತರಿಸಲಾಗಿದೆ.

ಎರಡನೇ ಹಂತದಲ್ಲಿ ಜಿಲ್ಲೆಯ ಅರ್ಹ 31351 ರೈತರುಗಳಿಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿನ್ವಯ ರೂ.34.03 ಕೋಟಿ ಪರಿಹಾರವನ್ನು (ಇನ್ ಪುಟ್ ಸಬ್ಸಿಡಿ) ವಿತರಣೆ ಮಾಡಲು ಅನುಮೋದನೆ ನೀಡಿ, ಡಿಬಿಟಿ ಮೂಲಕ ರೈತರ ಖಾತೆಗೆ ಜಮೆ ಮಾಡಲಾಗಿರುತ್ತದೆ. ಇಲ್ಲಿಯವರೆಗೆ ಜಿಲ್ಲೆಯ 2 ಹಂತದಲ್ಲಿ ಒಟ್ಟು 36944 ರೈತರಿಗೆ ರೂ.41.30 ಕೋಟಿಗಳನ್ನು ರೈತರ ಖಾತೆಗೆ ಜಮೆ ಮಾಡಲಾಗಿದೆ ಎಂದು ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ. ಬೆಳೆ ಹಾನಿ ಪರಿಹಾರ ಹಣ ಖಾತೆಗೆ ಜಮಾ ಆಗದೇ ಇರುವ ಬಗ್ಗೆ ದೂರುಗಳನ್ನು ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ, ಜಿಲ್ಲಾ ಮತ್ತು ತಾಲ್ಲೂಕುವಾರು ಸಹಾಯವಾಣಿ ತೆರೆಯಲಾಗಿದೆ. ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಿ ಪರಿಹಾರ ಕಂಡುಕೊಳ್ಳಬಹುದು. ಬೆಳೆ ಹಾನಿ ಪರಿಹಾರ ಪಡೆದುಕೊಳ್ಳಲು ಫ್ರೂಟ್ಸ್ ಐಡಿಗೆ ಪಹಣಿ ಜೋಡಣೆ ಕಡ್ಡಾಯವಾಗಿರುವುದರಿಂದ ಇದುವರೆಗೂ ಫ್ರೂಟ್ಸ್ ಐಡಿ ನೋಂದಣಿ ಮಾಡಿಕೊಳ್ಳಲ್ಲದ ರೈತರು ತಮ್ಮ ಆಧಾರ್, ಪಹಣಿ ಹಾಗೂ ಬ್ಯಾಂಕ್ ಪಾಸ್‌ಬುಕ್ ದಾಖಲೆಗಳನ್ನು ತೆಗೆದುಕೊಂಡು ಹತ್ತಿರದ ಕಂದಾಯ, ಕೃಷಿ ಅಥವಾ ತೋಟಗಾರಿಕೆ ಇಲಾಖೆಗಳ ಕಚೇರಿಗಳಿಗೆ ಭೇಟಿ ನೀಡಿ ನೋಂದಣಿ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಅಂತಹ ರೈತರು ಬೆಳೆ ಪರಿಹಾರ ಹಣ ಪಡೆದುಕೊಳ್ಳಲು ಅರ್ಹರಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

### ಜಿಲ್ಲಾ, ತಾಲ್ಲೂಕುವಾರು ಸಹಾಯವಾಣಿ ಸಂಖ್ಯೆ

ಜಿಲ್ಲಾಧಿಕಾರಿಗಳ ಕಾರ್ಯಾಲಯದ ದೂ.1077 ಅಥವಾ 08392-277100, ಬಳ್ಳಾರಿ ತಾಲ್ಲೂಕು ತಹಶೀಲ್ದಾರರ ಕಚೇರಿಯ ದೂ.08392-297472, ಸಂಡೂರು ತಹಶೀಲ್ದಾರರ ಕಚೇರಿಯ ದೂ.08395-260241, ಸಿರುಗುಪ್ಪ ತಹಶೀಲ್ದಾರರ ಕಚೇರಿಯ ದೂ.08396-220238, ಕುರುಗೋಡು ತಹಶೀಲ್ದಾರರ ಕಚೇರಿಯ ದೂ.08393-200014, ಕಂಪ್ಲಿ ಕುರುಗೋಡು ತಹಶೀಲ್ದಾರರ ಕಚೇರಿಯ ದೂ.08394-295554 ಗೆ ಸಂಪರ್ಕಿಸಬಹುದು.



# ಶ್ರೀಲಂಕಾಕ್ಕೆ ಪ್ರೀಮಿಯಂ ಇಂಧನ ಎಕ್ಸ್‌ಪಿ100 ರಫ್ತು

ಬೆಂಗಳೂರು: ಭಾರತದ ಇಂಧನ ಮೇಜರ್, ಇಂಡಿಯನ್ ಆಯಿಲ್, ನವಿ ಮುಂಬೈನ ನವ ಶೇವಾ, ಜವಾಹರಲಾಲ್ ನೆಹರು ಪೋರ್ಟ್ ಟ್ರಸ್ಟ್ (ಜೆಎನ್‌ಪಿಟಿ) ಯಿಂದ ಸುಪೀರಿಯರ್ 100 ಆಕ್ಟೇನ್ ಪ್ರೀಮಿಯಂ ಇಂಧನ ಎಕ್ಸ್‌ಪಿ100 ರ ಮೊದಲ ಪಾರ್ಸೆಲ್ ಅನ್ನು ಇಂದು ರಫ್ತು ಮಾಡಿದೆ. ಪ್ರೀಮಿಯಂ ಹೈ-ಎಂಡ್ ವಾಹನಗಳಿಗೆ ಅನುಗುಣವಾಗಿ, ಎಕ್ಸ್‌ಪಿ100 ಶ್ರೀಲಂಕಾದಲ್ಲಿನ ತನ್ನ ಗ್ರಾಹಕರಿಗೆ ಉತ್ತಮ ಕಾರ್ಯಕ್ಷಮತೆಯನ್ನು ನೀಡಲು ಸಿದ್ಧವಾಗಿದೆ.

ಎಕ್ಸ್‌ಪಿ100 ಅನ್ನು ಶ್ರೀಲಂಕಾಕ್ಕೆ ರಫ್ತು ಮಾಡುವ ಈ ಮೈಲಿಗಲ್ಲು ಇಂಡಿಯನ್ ಆಯಿಲ್‌ನ ಜಾಗತಿಕ ಶಕ್ತಿಯ ಆಟಗಾರನಾಗುವ ಮಹತ್ವಾಕಾಂಕ್ಷೆಯನ್ನು ಸಂಕೇತಿಸುತ್ತದೆ, ಇದು ಕಾರ್ಯಾಚರಣೆಗಳ ಪ್ರಮಾಣಕ್ಕಾಗಿ ಮಾತ್ರವಲ್ಲದೆ ಉತ್ಪನ್ನಗಳ ಗುಣಮಟ್ಟ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ಕೊಡುಗೆಗಳಿಗಾಗಿ ಗುರುತಿಸಲ್ಪಟ್ಟಿದೆ.

ಉದ್ಘಾಟನಾ ಸಾಗಣೆಯನ್ನು ಫ್ಲಾಗ್ ಆಫ್ ಮಾಡುತ್ತಾ, ಇಂಡಿಯನ್ ಆಯಿಲ್ ನಿರ್ದೇಶಕ (ಮಾರ್ಕೆಟಿಂಗ್) ಶ್ರೀ. ವಿ. ಸತೀಶ್ ಕುಮಾರ್ ಅವರು "ಇಂದು ನಮ್ಮ ಇನ್ನೊಂದು ಉತ್ಪನ್ನವು ಶ್ರೀಲಂಕಾದಲ್ಲಿ ಹೊಸ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳಲು ಹೊರಡುತ್ತಿರುವಾಗ ಒಂದು ಮಹತ್ವದ ಸಂದರ್ಭವನ್ನು ಗುರುತಿಸುತ್ತದೆ. ಇದು ಮೂರನೇ ಬಾರಿಗೆ ನಾವು ಕಡಲಾಚೆಯ ಉತ್ಪನ್ನವನ್ನು ತೆಗೆದುಕೊಳ್ಳುತ್ತಿದ್ದೇವೆ, ಭಾರತದಿಂದ ವಿಶ್ವಕ್ಕೆ ಗುಣಮಟ್ಟದ ಉತ್ಪನ್ನಗಳನ್ನು ಕಳುಹಿಸುವ ನಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತೇವೆ.

ಸುಜೋಯ್ ಚೌಧರಿ ಮಾತನಾಡಿ, "ನಾವು ನಮ್ಮ ಪ್ರೀಮಿಯಂ ಉತ್ಪನ್ನ ಎಕ್ಸ್‌ಪಿ100 ಅನ್ನು ಶ್ರೀಲಂಕಾಕ್ಕೆ ಫ್ಲಾಗ್ ಆಫ್ ಮಾಡುತ್ತಿರುವುದರಿಂದ ಇದು ಐತಿಹಾಸಿಕ ದಿನವಾಗಿದೆ.

ಈ ಉತ್ಪನ್ನವು ವ್ಯಾಪಕ ಗೋಚರತೆ ಮತ್ತು ಸ್ವೀಕಾರಾರ್ಹತೆಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ನಾವು ಸಮಗ್ರ ಪ್ರಚಾರ ಯೋಜನೆಗಳನ್ನು ರೂಪಿಸಿದ್ದೇವೆ.



# ತೋಟಗಾರಿಕಾ ಬೆಳೆಗಳಿಗೆ ಪರಿಹಾರ ನೀಡಲು ಒತ್ತಾಯಿಸಿ ಪ್ರತಿಭಟನೆ

ಮದ್ದೂರು: ಕಬ್ಬು ಸೇರಿದಂತೆ ತೋಟಗಾರಿಕಾ ಬೆಳೆಗಳಿಗೆ ಸಮರ್ಪಕ ಬರ ಪರಿಹಾರ ಹಾಗೂ ಬೆಳೆ ನಷ್ಟ ಪರಿಹಾರವನ್ನು ಒದಗಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ತಾಲೂಕಿನ ಕೊಪ್ಪದಲ್ಲಿ ಮದ್ದೂರು ನಾಗಮಂಗಲ ಮಾರ್ಗದ ರಸ್ತೆ ಸಂಚಾರ ತಡೆದು ಪ್ರತಿಭಟನೆ ಮಾಡಲಾಯಿತು.

ಸಮರ್ಪಕವಾದ ಬರ ಪರಿಹಾರ ಹಾಗೂ ಬೆಳೆನಷ್ಟ ಪರಿಹಾರ ಕೊಡದ ಸಕರ್ಿಾಟಿಜಜಜಿುಟಿಜಜರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿ, ರಸ್ತೆ ಸಂಚಾರ ತಡೆದ ಕಾರಣ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಪ್ರತಿಭಟನೆ ನೇತೃತ್ವವಹಿಸಿದ್ದ ರೈತ ಮುಖಂಡ ಕೀಳಘಟ್ಟ ನಂಜುಂಡಯ್ಯ ಮಾತನಾಡಿ, ಜಿಲ್ಲೆಯ ಪ್ರಮುಖ ಬೆಳೆಗಳಲ್ಲಿ ಕಬ್ಬು ಅಗ್ರಮಾನ್ಯ ಸ್ಥಾನವನ್ನು ಪಡೆದುಕೊಂಡಿದೆ. ಅದಕ್ಕಾಗಿಯೇ




ಮಂಡ್ಯ ಜಿಲ್ಲೆಯನ್ನು ಸಕ್ಕರೆ ನಾಡು ಎಂದು ಕರೆಯಲಾಗುತ್ತದೆ. ಪ್ರಸ್ತುತ ಮಂಡ್ಯ ಜಿಲ್ಲೆಗೆ ಭೀಕರ ಬರಗಾಲ ಬಂದೋದಗಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶದ ರೈತರು ತಾವು ಬೆಳೆದ ಬೆಳೆಗಳಿಂದ ನಷ್ಟ ಮಾಡಿಕೊಂಡು ವೇದನೆಪಡುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ ಇತಂಹ ಪರಿಸ್ಥಿತಿಯಲ್ಲಿ ಸರ್ಕಾರ ತೋಟಗಾರಿಕೆ ಬೆಳೆಗಳು ಮತ್ತು ಕಬ್ಬಿನ ಬೆಳೆಗೆ ಬರ ಮತ್ತು ಬೆಳೆ ನಷ್ಟ ಪರಿಹಾರವನ್ನು ನೀಡಲು ಮೀನಾಮೇಷ ಎಣಿಸಿ ಕೆಲವು ಬೆಳೆಗಳಿಗೆ ಮಾತ್ರ ಪರಿಹಾರ ನೀಡುವುದಾಗಿ ಘೋಷಿಸಿರುವುದು ಸರ್ಕಾರದ ಇಬ್ಬಗೆ ನೀತಿಯನ್ನು ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯ ಪ್ರಧಾನವಾದ ಕಬ್ಬಿನ ಬೆಳೆ ಗದ್ದೆಗಳಲ್ಲಿ ಒಣಗಿ ಬೆಂಡಾಗಿದೆ. ಇದರಿಂದ ರೈತರಿಗೆ ಲಕ್ಷಾಂತರ ರೂಪಾಯಿ ಹಣ ವ್ಯರ್ಥವಾಗಿದೆ. ತೋಟಗಾರಿಕೆ ಬೆಳೆಗಾದ ತೆಂಗು, ಅಡಿಕೆ, ಬಾಳೆ, ಸೀಬೆ, ಮಾವು ಸೇರಿದಂತೆ ಇತರ ಬೆಳೆಗಳು ರೈತನ ಕೈಗೆ ಸೇರದೆ ಸಂಕಷ್ಟ ಉಂಟು ಮಾಡಿವೆ. ಸಕರ್ಿಾಟಿಜಜಜಿುಟಿಜಜರ ಭತ್ತ, ರಾಗಿ, ಮೆಕ್ಕೆಜೋಳ ಬೆಳೆಗಳಿಗೆ ಮಾತ್ರ ಪರಿಹಾರ ನೀಡಲು ಹೊರಟ್ಟಿರುವುದು ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ಎಂಬ ಪರಿಸ್ಥಿತಿ ಉಂಟಾಗಿದೆ ಎಂದರು.

ರೈತ ಮುಖಂಡ ಸೊ.ಶಿ.ಪ್ರಕಾಶ್ ಮಾತನಾಡಿ, ಸರ್ಕಾರ ಕಬ್ಬು ಸೇರಿದಂತೆ ನಷ್ಟವಾಗಿರುವ ತೋಟಗಾರಿಕೆ ಬೆಳೆಗಳಿಗೆ ಸೂಕ್ತ ಪರಿಹಾರ ನೀಡಬೇಕು. ಫಸಲ್ ಭೀಮಾ ಯೋಜನೆಯಡಿ ಬೆಳೆ ವಿಮೆ ಮಾಡಿಸಿರುವ ರೈತರಿಗೂ ಇನ್ನೂ ಪರಿಹಾರ ಬಂದಿಲ್ಲ. ಅಧಿಕಾರಿಗಳು ಚುನಾವಣಾ ನೀತಿ ಸಂಹಿತೆಯ ನೆಪ ಹೇಳಿಕೊಂಡು ಕಾಲಹರಣ ಮಾಡುತ್ತಿದ್ದಾರೆ. ಇದರಿಂದ ವಿಮೆ ನಂಬಿಕೊಂಡಿರುವ ರೈತರ ಬದುಕು ಬರಡಾಗಿದೆ. ಸರ್ಕಾರ ತಕ್ಷಣ ಫಸಲ್ ಭೀಮಾ ಯೋಜನೆಯ ವಿಮೆ ಹಣವನ್ನು ರೈತರಿಗೆ ಕೊಡಿಸಬೇಕು. ಬೆಳೆ ಬೆಳೆಯುವ ಸಲುವಾಗಿ ಕೃಷಿ ಇಲಾಖೆಯ ನಿರ್ದೇಶನದಂತೆ ಕೊಳವೆಬಾವಿಗಳನ್ನು ಕೊರೆಸಿದ್ದು, ಆ ರೈತರಿಗೆ ಕೃಷಿ ಇಲಾಖೆಯಿಂದ 50 ಸಾವಿರ ಸಹಾಯಧನ ಮಂಜೂರಾಗಿಲ್ಲ. ಸಾಲ ಮಾಡಿ ಕೊಳವೆಬಾವಿ ಕೊರೆಯಿಸಿ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ತಕ್ಷಣ ಕೊಳವೆಬಾವಿ ಸಹಾಯಧನ ಮಂಜೂರು ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಕಂದಾಯ ನಿರೀಕ್ಷಕ ಮಹೇಂದ್ರ ಅವರು ಭೇಟಿ ನೀಡಿ ಮನವಿ ಪತ್ರ ಸ್ವೀಕರಿಸಿದರು.

ರೈತ ಮುಖಂಡರಾದ ಅಣ್ಣೂರು ಮಹೇಂದ್ರ, ಸೊ.ಶಿ.ಪ್ರಕಾಶ್, ನವೀನ್, ಕುಮಾರ್, ಜಗದೀಶ್, ಪುಟ್ಟಸ್ವಾಮಿ, ಅರಗಿನಮೇಳೆ ರಾಮೇಗೌಡ, ಉಮೇಶ್, ನಿಂಗೇಗೌಡ, ಸೀನಪ್ಪನದೊಡ್ಡಿ ಶ್ರೀನಿವಾಸ್, ಪಣ್ಣೆದೊಡ್ಡಿ ವೆಂಕಟೇಶ್, ಕುದರಗುಂಡಿ ನಾಗರಾಜು, ಶಿವರಾಮು, ಶಿವಮೂರ್ತಿ, ಕುಮಾರ್, ತಿಮ್ಮೇಶ್, ಶಿವನಂಜೇಗೌಡ, ರಾಮಣ್ಣ, ರಾಮಕೃಷ್ಣ ಸೇರಿದಂತೆ ಇತರರು ಇದ್ದರು.

# ಅಂಜಲಿ ಅಂಬಿಗೇರ ಹತ್ಯೆ ಖಂಡಿಸಿ ಬೃಹತ್ ಪ್ರತಿಭಟನೆ

ಮುಂಜಾನೆ ವಾರ್ತೆ ಸುದ್ದಿ ತಾಳಿಕೋಟಿ: ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆ ಖಂಡಿಸಿ ನಿಜಶರಣ ಅಂಬಿಗೇರ ಚೌಡಯ್ಯ ಕ್ಷೇಮಾಭಿವೃದ್ಧಿ ಸಂಘದ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ಜರುಗಿತು.

ಪಟ್ಟಣದ ಶ್ರೀ ಬಸವೇಶ್ವರ ವೃತ್ತದಿಂದ ಹೊರಟು ಡಾ.ಅಂಬೇಡ್ಕರ ವೃತ್ತ, ಕತ್ರಿ ಬಜಾರ, ಶಿವಾಜಿ ವೃತ್ತ, ರಾಣಾಪ್ರತಾಪಸಿಂಹ ವೃತ್ತ., ಬಸ್ ನಿಲ್ದಾಣದ ಮೂಲಕ ಮರಳಿ ಬಸವೇಶ್ವರ ವೃತ್ತಕ್ಕೆ ಬಂದು ತಹಶೀಲ್ದಾರ ಕೀರ್ತಿ ಚಾಲಕ ಅವರಿಗೆ ಮನವಿ ಸಲ್ಲಿಸಲಾಯಿತು. ಮನವಿಯಲ್ಲಿ ಹುಬ್ಬಳ್ಳಿಯ ಯುವತಿ ಅಂಜಲಿ ಅಂಬಿಗೇರಳನ್ನು ಹತ್ಯೆ ಮಾಡಿದ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಹತ್ಯೆಗೀಡಾದವರ ಪರಿವಾರಕ್ಕೆ 50 ಲಕ್ಷ ಹಣ ಪರಿಹಾರ ನೀಡಬೇಕು. ಹದಗೆಟ್ಟಿರುವ ರಾಜ್ಯ ಕಾನೂನು ಸುವ್ಯವಸ್ಥೆಗೊಳಿಸಬೇಕು ಮೊದಲಾದ ಸಂಗತಿಗಳನ್ನು ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ




ಈ ಸಂದರ್ಭದಲ್ಲಿ ಗುಂಡಕನಾಳ ಬೃಹನ್ಮಠದ ಗುರುಲಿಂಗ ಶಿವಾಚಾರ್ಯರು, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಸ್.ಪಾಟೀಲ, ನಿಜಶರಣ ಅಂಬಿಗೇರ ಚೌಡಯ್ಯ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕಾ ಘಟಕದ ಅಧ್ಯಕ್ಷ ಪರಶುರಾಮ ತಂಗಡಗಿ, ದಲಿತ ಮುಖಂಡ ಜೈಭೀಮ ಮುತ್ತಗಿ, ರಾಜ್ಯ ಬುಡಕಟ್ಟು ಹಿತಸಂರಕ್ಷಣಾ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಅಂಬರೀಶ ಕಾಮನಕೇರಿ, ಕುವೆಂಪು ಶಿಕ್ಷಣ ಸಂಸ್ಥೆ ಅಧ್ಯಕ್ಷ ಬಸವರಾಜ .ಎನ್.ನಾಯ್ಕೊಡಿ, ಶಿವರಾಜ ಗುಂಡಕನಾಳ ನಾಗೂರ ಮೊದಲಾದವರು ಮಾತನಾಡಿದರು.

ಪ್ರತಿಭಟನೆಯಲ್ಲಿ .ಪ್ರಮುಖರಾದ ಮಂಜುನಾಥಶೆಟ್ಟಿ, ಆರ್.ಎಲ್.ಕೊಪ್ಪದ, ಮುದಕಣ್ಣ ಬಡಿಗೇರ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ರಾಘವೇಂದ್ರ ಚವಾಣ, ರಾಘವೇಂದ್ರ ವಿಜಾಪುರ, ಗೋಪಾಲ ಕಟ್ಟಿಮನಿ, ಇಬ್ರಾಹಿಂ ಮನ್ಸೂರ,ಶಫೀಕ ಇನಾಮದಾರ. ಫಯಾಜ ಉತ್ನಾಳ, ರಾಜು ಸಜ್ಜನ, ಮಹಾಂತೇಶ ಮುರಾಳ, ನೀಲಮ್ಮ ಪಾಟೀಲ, ನಾಗರಾಜ ಬಳಿಗಾರ, ಕಿರಣ ಬಡಿಗೇರ, ಸುವರ್ಣಾ ಬಿರಾದಾರ, ಕಾಶಿನಾಥ ತಳವಾರ, ಶ್ರೀಶೈಲ ಬಿರಾದಾರ, ಕಾಶಿನಾಥ ತಳವಾರ ಅಸ್ಕಿ, ಬಾಲು ತಳವಾರ, ದಂಡಪ್ಪ ಬಡಿಗೇರ, ಸಿದ್ದು ತಳವಾರ, ರಮೇಶ ಮೂಕಿಹಾಳ, ಮಲ್ಲಿಕಾರ್ಜುನ ಜೂಲಿ, ಭೀಮಣ್ಣ ತಳವಾರ, ಶಶಿಕಾಂತ ಮೂಕಿಹಾಳ, ಲಕ್ಷ್ಮಣ ಯಮನಪ್ಪ ತಳವಾರ, ಮಾನಪ್ಪ ನಾಯ್ಕೊಡಿ, ಕಾಶಿನಾಥ ಮದರಿ, ಮಲ್ಲು ಮದ್ದರಕಿ, ಬಸವರಾಜ ಯಡಹಳ್ಳಿ, ಅಡತ ಅಸೋಶಿಯೇಶನ್ ನ ಮಲ್ಲಿಕಾರ್ಜುನ ನಾಗರಾಳ, ಸುರೇಶ ಪಾಟೀಲ, ಅಶೋಕ ಜಾಲವಾದಿ, ಅಶೋಕ ಚಿನಗುಡಿ, ಈರಣ್ಣ ಸಜ್ಜನ ಇತರರಿದ್ದರು.

ವರದಿ ಸುನೀಲ್ ಎಲ್ ತಳವಾರ ಮುಂಜಾನೆ ವಾರ್ತೆ ತಾಳಿಕೋಟಿ

# ತೊರ್ನಹಳ್ಳಿಯಲ್ಲಿ ಅದ್ದೂರಿಯಾಗಿ ನಡೆದ ಹೂವಿನ ಕರಗ ಮಹೋತ್ಸವ

ಮಾಲೂರು: ತಾಲ್ಲೂಕಿನ ಕಸಬಾ ಹೋಬಳಿಯ ತೊರ್ನಹಳ್ಳಿ ಗ್ರಾಮದಲ್ಲಿ ಶ್ರೀ ದ್ರೌಪತಾಂಭ ದೇವಿ ಹಾಗೂ ಶ್ರೀ ಧರ್ಮರಾಯ ಸ್ವಾಮಿಯ 58ನೇ ವರ್ಷದ ಹೂವಿನ ಮಹೋತ್ಸವ ಭಾನುವಾರ ರಾತ್ರಿ ಅದ್ದೂರಿಯಾಗಿ ನೆರವೇರಿತು.

ಮಾಲೂರು ತಾಲೂಕಿನ ತೊರ್ನಹಳ್ಳಿ ಗ್ರಾಮದಲ್ಲಿ ಮಳೆಯ ನಡುವೆಯೂ ಶ್ರೀ ದ್ರೌಪತಾಂಭ ದೇವಿ ಹಾಗೂ ಶ್ರೀ ಧರ್ಮರಾಯ ಸ್ವಾಮಿಯ 58ನೇ ವರ್ಷದ ಹೂವಿನ ಕರಗ ಮಹೋತ್ಸವ ಅದ್ದೂರಿಯಾಗಿ ನಡೆದಿದೆ. ಕರಗ ಹೊತ್ತು ನಾಟ್ಯ ಪ್ರದರ್ಶಿಸಿದ ಕರಗದ ಪೂಜಾರಿ ಮಾರೇಶ್ ಅದ್ಭುತವಾಗಿ ತಾಳಕ್ಕೆ ತಕ್ಕಂತೆ ನೃತ್ಯ ಪ್ರದರ್ಶಿಸಿದರು.

ಭಾನುವಾರ ಮಧ್ಯರಾತ್ರಿ ಕರಗದ ಶಕ್ತ್ಯೋ􀀀ತ್ಸವವು ಅತ್ಯಂತ ಸಡಗರ, ಸಂಭ್ರಮದೊಂದಿಗೆ ಅದ್ದೂರಿಯಾಗಿ ಜರುಗಿತು. ಸಾವಿರಾರು ಮಂದಿ ಐತಿಹಾಸಿಕ ಹೂವಿನ ಕರಗವನ್ನು ಕಣ್ತುಂಬಿಕೊಂಡರು. ನೂರಾರು ವೀರಕುಮಾರರು ಕತ್ತಿಗಳನ್ನು ಹಿಡಿದು ಗೋವಿಂದ ಗೋವಿಂದ ಗೋವಿಂದ ಘೋಷಣೆಗಳನ್ನು ಕೂಗುತ್ತ, ಡಿಕ್ ಡಿ ಡಿಕ್ ಡಿ ಎಂದು ಅಲಗು ಮಾಡುತ್ತಾ, ಕರಗದ ಹಿಂದೆ ಹೆಜ್ಜೆ ಹಾಕಿದರು. ತೊರ್ನಹಳ್ಳಿ, ಬಂಡೆಗೂಡಿಸಲು ಗ್ರಾಮದ ತುಂಬೆಲ್ಲ ಸಂಚರಿಸಿದ ಕರಗವು ಎಲ್ಲಾ ದೇವಾಲಯಗಳಿಗೆ, ದರ್ಗಾ ಸೇರಿದಂತೆ ಊರಿನ ತುಂಬೆಲ್ಲ ಸಂಚರಿಸಿ ಪೂಜೆಯನ್ನು ಸ್ವೀಕರಿಸಿತು. ಸೋಮವಾರ ಬೆಳಗ್ಗೆ



9:15ಕ್ಕೆ ದೇವಸ್ಥಾನವನ್ನು ತಲುಪುವುದರ ಮೂಲಕ ಅದ್ದೂರಿ ಕರಗ ಮಹೋತ್ಸವ ಸಂಪನ್ನವಾಯಿತು.

ತೊರ್ನಹಳ್ಳಿಯ ಕರಗ ಮಹೋತ್ಸವ ಕಾರ್ಯಕ್ರಮಕ್ಕೆ ಮಾಲೂರಿನ ಸನ್ಮಾನ್ಯ ಶಾಸಕರಾದ ಕೆ.ವೈ. ನಂಜೇಗೌಡರು ಹಾಗೂ ಎಸ್ ಜೆ ಪಿ ಪಾರ್ಟಿಯ ಸಂಸ್ಥಾಪಕರು ಮತ್ತು ಸಮಾಜ ಸೇವಕರಾದ ಹೂಡಿ ವಿಜಯ್ ಕುಮಾರ್ ರವರು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು. ಈ ಸಂದರ್ಭದಲ್ಲಿ ದೇವಾಲಯದ ಆಡಳಿತ ಮಂಡಳಿ ವತಿಯಿಂದ ಚಿಕ್ಕ ಸನ್ಮಾನ ಕಾರ್ಯಕ್ರಮ ನೆರವೇರಿತು.

ಕರಗದ ಪ್ರಯುಕ್ತ ಊರಿನ ತುಂಬೆಲ್ಲಾ ವಿದ್ಯುತ್ ದೀಪಗಳ ಅಲಂಕಾರ ನೋಡುಗರ ಕಣ್ಮನ ಸೆಳೆಯಿತು. ಈ ಸಂದರ್ಭದಲ್ಲಿ ಶ್ರೀ ಧರ್ಮರಾಯಸ್ವಾಮಿ, ಶ್ರೀ ಭೀಮೇಶ್ವರ ಸ್ವಾಮಿ, ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಸಪಲಮ್ಮ ದೇವಿ, ಶ್ರೀ ಮುನೇಶ್ವರ ಸ್ವಾಮಿ, ಶ್ರೀ ಯಲ್ಲಮ್ಮ ದೇವಿ, ಶ್ರೀ ದೊಡ್ಡಮ್ಮದೇವಿ, ಶ್ರೀ ಆಂಜನೇಯ ಸ್ವಾಮಿ, ಹಾಗೂ ಶ್ರೀ ಭುವನೇಶ್ವರಿ ದೇವಿ ಪಲ್ಲಕ್ಕಿಗಳ ಮೆರವಣಿಗೆ ನಡೆಯಿತು. ಗ್ರಾಮಸ್ಥರು ಪೂಜೆಯನ್ನು ಸಲ್ಲಿಸಿ ದೇವರ ಕೃಪೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಶ್ರೀ ದ್ರೌಪತಾಂಭ ದೇವಿ ಹಾಗೂ ಶ್ರೀ ಧರ್ಮರಾಯ ಸ್ವಾಮಿ ದೇವಾಲಯ ಸಮಿತಿಯ ಶ್ರೀ ವಿ.ಮುನಿಯಪ್ಪ, ಟಿ.ಸಿ ಶ್ರೀನಿವಾಸ್, ಟಿ.ಆರ್.ರಮೇಶ್ ಬಾಬು, ಟಿ.ಎಂ.ರೋಜಾ ರಾಜಪ್ಪ, ಕೆ.ಮುನಿಶಾಮಪ್ಪ, ಗೌಡರ ನಾರಾಯಣಪ್ಪ, ಕೃಷ್ಣಪ್ಪ (ಟಿಸಿಕೆ) ಟಿ.ಸಿ.ನಾರಾಯಣಪ್ಪ, ಟಿ.ಪಿ.ರಾಜಣ್ಣ, ತಾತೆಪ್ಪ, ನಾರಾಯಣಪ್ಪ, ಎಸ್.ರಾಮಪ್ಪ, ರಾಮಕೃಷ್ಣಪ್ಪ, ಶ್ರೀನಿವಾಸ್ ಸೇರಿದಂತೆ ಇತರರು ಇದ್ದರು.

ಈ ಕರಗ ಮಹೋತ್ಸವ ಕಾರ್ಯಕ್ರಮದಲ್ಲಿ ತೊರ್ನಹಳ್ಳಿ, ಬೈರನಹಳ್ಳಿ, ಸೊಣ್ಣನಾಯಕನಹಳ್ಳಿ, ಬಂಡೆಗೂಡಿಸಲು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

# ಇಂಡಿಗನತ್ತ ಮತಗಟ್ಟೆ ಧ್ವಂಸ ಪ್ರಕರಣ ಬಂಧಿತರಾಗಿದ್ದ 46 ಮಂದಿಗೆ ಬಿಡುಗಡೆ

ಚಾಮರಾಜನಗರ: ಲೋಕಸಭೆ ಚುನಾವಣೆಯ ಮತದಾನದ ಸಮಯದಲ್ಲಿ ಇಂಡಿಗನತ್ತ ಗ್ರಾಮದಲ್ಲಿ ರೊಚ್ಚಿಗೆದ್ದ ಗ್ರಾಮಸ್ಥರು ಮತಗಟ್ಟೆಯನ್ನು ಧ್ವಂಸ ಮಾಡಿದ್ದರು. ಮತಗಟ್ಟೆ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ 46 ಬಂಧಿತ ಆರೋಪಿಗಳಿಗೆ ಜಾಮೀನು ಸಿಕ್ಕಿದೆ.

ಬಿಜೆಪಿ ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ಬಂಧಿತರಿಗೆ ಜಾಮೀನು ನೀಡಿದ್ದಾರೆ. ಮತಗಟ್ಟೆ ಧ್ವಂಸ ಪ್ರಕರಣದಲ್ಲಿ 26 ಪುರುಷರು, 20 ಮಹಿಳೆಯರು ಬಂಧಿತರಾಗಿದ್ದರು. ಇದೀಗ ಎಲ್ಲರು ಜಾಮೀನು ಪಡೆದು ಹೊರಬಂದಿದ್ದಾರೆ. ಇದೇ ವೇಳೆ ತಮಗೆ ಮೂಲ ಸೌಕರ್ಯ ಕಲ್ಪಿಸಿ ಕೊಡಿ ಎಂದು ಇಂಡಿಗನತ್ತ ಗ್ರಾಮದ ಮಹಿಳೆಯರು ಕಣ್ಣೀರಿಟ್ಟರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕಳೆದ ಏಪ್ರಿಲ್ 26ರಂದು ಮೊದಲ ಹಂತದ ಮತದಾನ ನಡೆದಿತ್ತು ಆ ದಿನ ಚಾಮರಾಜನಗರ ಲೋಕಸಭಾ ಕ್ಷೇತ್ರದ ಮಹದೇಶ್ವರಬೆಟ್ಟ ವ್ಯಾಪ್ತಿಯ ಐದು ಗ್ರಾಮಗಳಲ್ಲಿ ಮತದಾನವನ್ನು ಬಹಿಷ್ಕರಿಸಲಾಗಿತ್ತು. ಇದೇ ವೇಳೆ ಇಂಡಿಗನತ್ತ ಗ್ರಾಮದಲ್ಲಿ ಮತಗಟ್ಟೆಯನ್ನೇ ಧ್ವಂಸ ಮಾಡಲಾಗಿತ್ತು



ಎಷ್ಟು ಬಾರಿ ಮನವಿ ಮಾಡಿದರೂ ಈ ಗ್ರಾಮಗಳಲ್ಲಿ ಮೂಲ ಸೌಕರ್ಯವನ್ನು ಕಲ್ಪಿಸಲಾಗಿಲ್ಲ. ಚುನಾವಣೆ ಬಂದಾಗ ಮಾತ್ರ ಈ ರಾಜಕಾರಣಿಗಳಿಗೆ ನಮ್ಮ ನೆನಪಾಗುತ್ತದೆ. ಅದಾದ ಬಳಿಕ ನಮ್ಮನ್ನು ಕೇಳುವವರೇ ಇಲ್ಲ ಎಂದು ಆರೋಪಿಸಿ ಮಹದೇಶ್ವರಬೆಟ್ಟ ವ್ಯಾಪ್ತಿಯ ಐದು ಗ್ರಾಮಗಳ ಗ್ರಾಮಸ್ಥರು ಮತದಾನವನ್ನು ಬಹಿಷ್ಕಾರ ಮಾಡಿದ್ದರು.

ಇನ್ನು ಇಂಡಿಗನತ್ತ ಗ್ರಾಮದಲ್ಲಿ ರೊಚ್ಚಿಗೆದ್ದ ಗ್ರಾಮಸ್ಥರು ಮತಗಟ್ಟೆಯನ್ನು ಧ್ವಂಸ ಮಾಡಿದ್ದರು. ಮತದಾನದಿಂದ ದೂರ ಉಳಿದ ಗ್ರಾಮಸ್ಥರಿಂದ ಈ ಕೃತ್ಯ ನಡೆದಿತ್ತು. ಈ ವೇಳೆ ಗ್ರಾಮಸ್ಥರ ಮನವೊಲಿಕೆಗೆ ತೆರಳಿದ್ದ ಅಧಿಕಾರಿಗಳ ಮೇಲೆಯೂ ಹಲ್ಲೆ ನಡೆಸಲಾಗಿತ್ತು. ಆಕ್ರೋಶಗೊಂಡ ಹಲವರು ಇವಿಎಂ, ಮೇಜು ಕುರ್ಚಿ ಮತಗಟ್ಟೆ ಸಾಮಗ್ರಿಗಳನ್ನು ಧ್ವಂಸ ಮಾಡಿದ್ದರು.

ಸ್ಥಳದಲ್ಲಿ ಜನರನ್ನು ಚದುರಿಸಲು ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದರು. ಇದೇ ವೇಳೆ ತಿರುಗಿಬಿದ್ದ ಜನರು ಸಹ ಪೊಲೀಸರ ಮೇಲೆ ಕಲ್ಲು ತೂರಿದ್ದರು. ಇದರಿಂದಾಗಿ ಸ್ಥಳದಲ್ಲಿ ಬಿಗುವಿನ ವಾತವರಣ ನಿರ್ಮಾಣವಾಗಿತ್ತು. ಸಾರ್ವಜನಿಕರು ಸೇರಿ ಅಧಿಕಾರಿಗಳಿಗೂ ಗಾಯಗಳಾಗಿತ್ತು. ಪುರುಷರು, ಮಹಿಳೆಯರು ಎನ್ನದೆ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದರು

ಇಂಡಿಗನತ್ತ, ತೇಕಣೆ, ಮೆಂದಾರೆ ಹಾಗೂ ತುಳಸಿಕೆರೆ ಗ್ರಾಮಗಳಲ್ಲಿ ಮತದಾನವನ್ನು ಬಹಿಷ್ಕಾರ ಮಾಡಲಾಗಿತ್ತು. ಪಡಸಲನತ್ತ ಗ್ರಾಮದಲ್ಲಿ 85 ಮತದಾರರ ಪೈಕಿ ಕೇವಲ ಇಬ್ಬರು ಮತದಾನ ಮಾಡಿದ್ದರು. ಉಳಿದಂತೆ ಮತಗಟ್ಟೆಗಳತ್ತ ಯಾರೊಬ್ಬರೂ ಸುಳಿದಿರಲಿಲ್ಲ.

ಕನಿಷ್ಠ ಮೂಲಭೂತ ಸೌಕರ್ಯವನ್ನೂ ನೀಡಲಾಗಿಲ್ಲ. ಕುಡಿಯುವ ನೀರು, ರಸ್ತೆ, ವಿದ್ಯುತ್, ಆರೋಗ್ಯ, ಶಿಕ್ಷಣ ಎಲ್ಲವೂ ಇಲ್ಲಿ ಮರೀಚಿಕೆಯಾಗಿದೆ. ಕೆಲವು ದಿನಗಳ ಹಿಂದೆಯೇ ಮತದಾನ ಬಹಿಷ್ಕರಿಸುವುದಾಗಿ ಎಚ್ಚರಿಕೆ ನೀಡಲಾಗಿತ್ತು. ಆದರೂ, ಯಾವೊಂದು ಭರವಸೆ ಸಿಗದೇ ಇರುವ ಹಿನ್ನೆಲೆಯಲ್ಲಿ ಮತದಾನವನ್ನು ಬಹಿಷ್ಕಾರ ಮಾಡುತ್ತಿರುವುದಾಗಿ ಗ್ರಾಮಸ್ಥರು ಹೇಳಿದ್ದಾರೆ. ವರದಿ: ಮಹದೇವಪ್ರಸಾದ್ ಹಂಗಳ



# ಬೆಂಗಳೂರು ಪೋಲೀಸರೊಂದಿಗೆ ವಾವ್ ಸ್ಕಿನ್ ಸೈನ್ಸ್

ಬೆಂಗಳೂರು: ಬಿಸಿಲು ಮತ್ತು ಧೂಳಿನ ವಿರುದ್ಧ ಹೋರಾಡುವ ನಮ್ಮ ಪೋಲೀಸ್ ಸಿಬ್ಬಂದಿಗಳು ಎದುರಿಸುತ್ತಿರುವ ಸವಾಲುಗಳನ್ನು ಎದುರಿಸಲು ವಾವ್ ಸ್ಕಿನ್ ಸೈನ್ಸ್ ಬೆಂಗಳೂರು ಪೊಲೀಸರೊಂದಿಗೆ ಕೈಜೋಡಿಸಿದೆ.

ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಬೆಂಗಳೂರು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ತಾಪಮಾನವಾದ ಬೇಸಿಗೆಯನ್ನು ಅನುಭವಿಸಿತ್ತ, ಪರಿಣಾಮಕಾರಿ ಸೂರ್ಯನ ತೀಕ್ಷ ಕಿರಣಗಳಿಂದ ಹೆಚ್ಚಿನ ರಕ್ಷಣೆಯ ಅಗತ್ಯವನ್ನು ತೀವ್ರಗೊಳಿಸುತ್ತದೆ.

ಮುಂಚೂಣಿ ಕೆಲಸಗಾರರನ್ನು ಬೆಂಬಲಿಸುವ ತನ್ನ ಬದ್ಧತೆಯ ಭಾಗವಾಗಿ, ವಾವ್ ಸ್ಕಿನ್ ಸೈನ್ಸ್ ಬೆಂಗಳೂರಿನ ಟ್ರಾಫಿಕ್ ಯೋಧರಿಗೆ ತಮ್ಮ ಹೊಸ ವಾವ್ ಸನ್ಸ್ಕ್ರೀನ್ ಜೆಲ್ ಗಳನ್ನು ಹೊಂದಿರುವ 250 ಸನ್ ಪ್ರೊಟೆಕ್ಷನ್ ಕಿಟ್ಗಳನ್ನು ಪ್ರಸ್ತುತಪಡಿಸಿತು. ಈ ಕಿಟ್ ಗಳು ಹಾನಿಕಾರಕ ಅಲ್ಟ್ರಾವಯಲೆಟ್ ಕಿರಣಗಳ ವಿರುದ್ಧ ಹೆಚ್ಚು-ಅಗತ್ಯವಿರುವ ರಕ್ಷಣೆಯನ್ನು ಒದಗಿಸಿದವು ಮತ್ತು ವಿಸ್ತೃತ ಸೂರ್ಯನ ಮಾನ್ಯತೆಯಿಂದ ಉಂಟಾಗುವ ಚರ್ಮದ ಹಾನಿಯ ಅಪಾಯವನ್ನು ತಗ್ಗಿಸಲು ಸಹಾಯ ಮಾಡಿತು.



ಮುಂಚೂಣಿ ಕೆಲಸಗಾರರನ್ನು ಬೆಂಬಲಿಸುವ ತನ್ನ ಬದ್ಧತೆಯ ಭಾಗವಾಗಿ, ವಾವ್ ಸ್ಕಿನ್ ಸೈನ್ಸ್ ಬೆಂಗಳೂರಿನ ಟ್ರಾಫಿಕ್ ಯೋಧರಿಗೆ ತಮ್ಮ ಹೊಸ ವಾವ್ ಸನ್ಸ್ಕ್ರೀನ್ ಜೆಲ್ ಗಳನ್ನು ಹೊಂದಿರುವ 250 ಸನ್ ಪ್ರೊಟೆಕ್ಷನ್ ಕಿಟ್ಗಳನ್ನು ಪ್ರಸ್ತುತಪಡಿಸಿತು. ಈ ಕಿಟ್ ಗಳು ಹಾನಿಕಾರಕ ಅಲ್ಟ್ರಾವಯಲೆಟ್ ಕಿರಣಗಳ ವಿರುದ್ಧ ಹೆಚ್ಚು-ಅಗತ್ಯವಿರುವ ರಕ್ಷಣೆಯನ್ನು ಒದಗಿಸಿದವು ಮತ್ತು ವಿಸ್ತೃತ ಸೂರ್ಯನ ಮಾನ್ಯತೆಯಿಂದ ಉಂಟಾಗುವ ಚರ್ಮದ ಹಾನಿಯ ಅಪಾಯವನ್ನು ತಗ್ಗಿಸಲು ಸಹಾಯ ಮಾಡಿತು.

ವಾವ್ ಸ್ಕಿನ್ ಸೈನ್ಸ್‌ನ ಸಹ–ಸಂಸ್ಥಾಪಕರಾದ ಮನೀಶ್ ಚೌಧರಿ ಅವರು ಈ ಸಹಯೋಗದ ಮಹತ್ವವನ್ನು ಎತ್ತಿ ತೋರಿಸುತ್ತಾ, ವಾವ್ ಸ್ಕಿನ್ ಸೈನ್ಸ್ ನಮ್ಮ ಸಮುದಾಯವನ್ನು ರಕ್ಷಿಸುವವರ ಯೋಗಕ್ಷೇಮ ರಕ್ಷಣೆಗೆ ಬದ್ಧವಾಗಿದೆ.

ಬೆಂಗಳೂರು ಪೊಲೀಸರೊಂದಿಗೆ ನಮ್ಮ ಪಾಲುದಾರಿಕೆಯು ಅಗತ್ಯವನ್ನು ಒದಗಿಸುವ ಗುರಿಯನ್ನು ಹೊಂದಿದೆ. ನಮ್ಮ ಕೆಚ್ಚೆದೆಯ ಟ್ರಾಫಿಕ್ ಯೋಧರಿಗೆ ಸೂರ್ಯನ ರಕ್ಷಣೆ, ಅವರ ಕರ್ತವ್ಯದ ಸಮಯದಲ್ಲಿ ಕಠಿಣವಾದ ಸೂರ್ಯನ ಕಿರಣಗಳನ್ನು ಎದುರಿಸುತ್ತಿರುವ ನಮ್ಮ ಟ್ರಾಫಿಕ್ ಯೋಧರ ಯೋಗಕ್ಷೇಮಕ್ಕೆ ಕೊಡುಗೆ ನೀಡಿ ನಾವು ಗೌರವಿಸುತ್ತೇವೆ.

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
21 TUESDAY MAY 2024
21 ಮಂಗಳವಾರ ಮೇ 2024

# ಹೃದಯ ಕವಾಟ ವಲಯದಲ್ಲಿ ಪ್ರಮುಖ ಮೂರು ವೈದ್ಯಕೀಯ ಪ್ರಯೋಗ

ಬೆಂಗಳೂರು: ಜಾಗತಿಕ ಹೃದಯ ಕವಾಟ ವಲಯದಲ್ಲಿ ನೆಕ್ಸ್ಟ್–ಜೆನ್‌ಟಿಎಚ್‌ವಿ (ಟ್ರಾನ್ಸ್ಕ್ಯಥೆಟರ್ ಹಾರ್ಟ್ ವಾಲ್ವ್) ಸರಣಿಯಲ್ಲಿ ಭಾರತದಮೆರಿಲ್‌ನ ಮೈವಾಲ್ ಟಿಎಚ್ವಿಯ ಮಹತ್ತರ ಸಾಧನೆ: ಯುರೋ–ಪಿಸಿಆರ್ 2024 ನಲ್ಲಿ ಯಶಸ್ವಿಯಾಗಿ ಪ್ರಾಥಮಿಕ ಫಲಿತಾಂಶಗಳನ್ನುಅನಾವರಣ ಗೊಳಿಸಿದ್ದು, ವೈದ್ಯಕೀಯ ಪ್ರಯೋಗವನ್ನು ಪ್ರತಿಷ್ಠಿತ ಲಾನ್ಸೆಟ್‌ಇವರಿಂದ ಮಾನ್ಯತೆ ಪಡೆದು, ಅಂಗೀಕರಿಸಲಾಗಿದೆ. ಮೆರಿಲ್ ಲೈಫ್ ಸೈನ್ಸಸ್ ನಿಂದ ರೋಚಕ ಸುದ್ದಿ! ಯುರೋ ಪಿಸಿಆರ್ 2024 ಪ್ಯಾರಿಸ್‌ನಲ್ಲಿ ಲ್ಯಾಂಡ್ಮಾರ್ಕ್ ಪ್ರಯೋಗದ 30 ದಿನಗಳ ಪ್ರಾಥಮಿಕ ಫಲಿತಾಂಶಗಳನ್ನು ಮೇ 15 ರಂದು ಪ್ರಸ್ತುತಪಡಿಸಲಾಯಿತು.

ಇಂಟರ್ ವೆನ್ಷನಲ್ ಕಾರ್ಡಿಯಾಲಜಿ ಕ್ಷೇತ್ರದಲ್ಲಿ ಪ್ರಸ್ತುತ ಅಭ್ಯಾಸಗಳನ್ನು ಕ್ರಾಂತಿಕಾರಿಯಾಗಿ ಪರಿವರ್ತಿಸಲುಸಿದ್ಧವಾಗಿರುವ ಪ್ರಮುಖ ಮೂರು ವೈದ್ಯಕೀಯ ಪ್ರಯೋಗಗಳಲ್ಲಿ ಲ್ಯಾಂಡ್‌ಮಾರ್ಕ್‌ಪ್ರಯೋಗವು ಒಂದು ಎಂದು ಯುರೋ ಪಿಸಿಆರ್ ಗುರುತಿಸಿದೆ.

ಲ್ಯಾಂಡ್ಮಾರ್ಕ್ ಟ್ರಯಲ್‌ನ ಅಧ್ಯಕ್ಷರು ಮತ್ತು ಅಧ್ಯಯನ ನಿರ್ದೇಶಕರುಆದ ಪ್ರೊಫೆಸರ್ ಪ್ಯಾಟ್ರಿಕ್ ಸೆರುಯ್ಸ್ ರವರು ಹೇಳಿದಂತೆ "ಮೈವಾಲ್‌ಟಿಎಚ್‌ವಿ ಸರಣಿಗಳು ಹೊಸ ನೆಕ್ಸ್ಟ್–ಜನ್‌ಟಿಎಚ್ ವಿ ಸಾಧನಗಳಾಗಿವೆ;ಸೇಪಿಯನ್ ಮತ್ತು ಎವಲುಟ್ ಟಿಎಚ್‌ವಿ ಸರಣಿಗಿಂತ ಕೆಳಶ್ರೇಣಿಯಲ್ಲಿಲ್ಲ. ಮೈವಾಲ್ ಟಿ ಎಚ್ ವಿ ಸರಣಿಯುಸಾಂಪ್ರದಾಯಿಕ, ಮಧ್ಯಂತರ ಮತ್ತು

ಹೆಚ್ಚುವರಿ–ದೊಡ್ಡ ವ್ಯಾಸವನ್ನು ಒಳಗೊಂಡಿರುವ ವಿಶಿಷ್ಟ 1.5 ಒಒ ವ್ಯಾಸದಅಳತೆಯನ್ನು ಹೊಂದಿದ್ದು ಅದು ಪ್ರತಿ ರೋಗಿಯ ಮಲ್ಟಿ ಸ್ಲೈಸ್ ಸಿಟಿಸ್ಕ್ಯಾನ್–ವ್ಯಾಖ್ಯಾನಿತ ಮಹಾಪಧಮನಿಯ ಕವಾಟದ ಉಂಗುರ ಪ್ರದೇಶಕ್ಕೆ ಹೊಂದಿಕೆಯಾಗುತ್ತದೆ ಮತ್ತು ನಿಖರವಾಗಿ ಹೊಂದಿಕೊಳ್ಳುತ್ತದೆ ಎಂದು ಲ್ಯಾಂಡ್ಮಾರ್ಕ್ ಅಧ್ಯಯನ ತಿಳಿಸುತ್ತದೆ.

ಗ್ಲೋಬಲ್ ಪ್ರಿನ್ಸಿಪಲ್ ಇನ್ವೆಸ್ಟಿಗೇಟರ್, ಪ್ರೊ. ಆಂಡ್ರಿಯಾಸ್ ಬೌಂಬಾಚ್‌ಅವರು ಹೇಳುವ ಪ್ರಕಾರ, ಮೈವಾಲ್ ಟಿಎಚ್‌ವಿ ಸರಣಿಯು ಸಮಕಾಲೀನ. ಟಿಎಚ್‌ವಿ ಸರಣಿಯಂತೆ ಸುರಕ್ಷಿತ ಮತ್ತು ಪರಿಣಾಮಕಾರಿ ಎಂದು ಲ್ಯಾಂಡ್ಮಾರ್ಕ್ ಪ್ರಯೋಗದಲ್ಲಿ ತೋರಿಸಲಾಗಿದೆ. ನಮ್ಮ ರೋಗಿಗಳನ್ನು 10 ವರ್ಷಗಳ ಕಾಲ ಗಮನಿಸಲಾಗುತ್ತದೆ ಮತ್ತು ಮೂರು ಚಿಕಿತ್ಸಾ ವಿದದ ಸಾಧನಗಳಿಂದ ದೀರ್ಘಾವಧಿಯ ಫಲಿತಾಂಶಗಳನ್ನು ನೋಡಲು ಬಯಸುತ್ತೇವೆ ಎಂದರು.

ಮೆರಿಲ್ ಕಾರ್ಪೊರೇಟ್ ಸ್ಟ್ರಾಟಜಿಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಸಂಜೀವ್ ಭಟ್ ಅವರು ಹಾಜರಿದ್ದರು.

**ಸ್ಥಳೀಯ**

ಇ–ಪೇಪರ್: www.munjaneevartheepaper.com



## ಹೊಸನಗರದಲ್ಲಿ ವರುಣನ ಆರ್ಭಟ!
## ಜನ ಜೀವನ ಅಸ್ತ ವ್ಯಸ್ತ....

ಹೊಸನಗರ :- ತಾಲೂಕಿನಲ್ಲಿ ಸೋಮವಾರ ಸಂಜೆ ಸುರಿದ ಕೃತಿಕಾ ಮಳೆಗೆ ಮಲೆನಾಡು ತತ್ತರ. ಕಳೆದ ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆ. ಗುಡುಗು ಸಹಿತ ಮಳೆ ಆಗುತ್ತಿದ್ದು. ಜಿಲ್ಲೆಯಲ್ಲಿ ಆರೇಂಜ್ ಅಲರ್ಟ್ ಘೋಷಣೆ ಹವಾಮಾನ ಇಲಾಖೆ ಮಾಡಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ಹೊಸನಗರ ತೀರ್ಥಹಳ್ಳಿ ಭಾಗದಲ್ಲಿ ಅತೀ ಹೆಚ್ಚು ಮಳೆಯಾಗಿದೆ.

ವರದಿ. ತನುಜ್ ಕುಮಾರ್. ಹೊಸನಗರ

# ಬಂಡೀಪುರ ಅನಾರೋಗ್ಯದಿಂದ ಹೆಣ್ಣಾನೆ ಸಾವು

ಗುಂಡ್ಲುಪೇಟೆ: ಅನಾರೋಗ್ಯದಿಂದ ಹೆಣ್ಣಾನೆ ಸಾವನ್ನಪಿರುವ ಘಟನೆ ಬಂಡೀಪುರದ ಮೊಳೆಯೂರು ವಲಯದಲ್ಲಿ ನಡೆದಿದೆ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಳೆಯೂರು ವಲಯದ ಮೊಳೆಯೂರು ಶಾಖೆಯ ವದಲೀಪೂರ್ವ ಗಸ್ತಿನ ಹಿಡುಗಲಪಂಚ ಕೆರೆಯ ಅರಣ್ಯ ಪ್ರದೇಶದಲ್ಲಿ ಸಿಬ್ಬಂದಿಗಳು ಗಸ್ತು ಮಾಡುವಾಗ ಕಾಡಾನೆಯೊಂದು ಕೆರೆಯ ಸಮೀಪ ಬಿದ್ದಿರುವುದನ್ನು ಗಮನಿಸಿ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ ತಕ್ಷಣ ಡಾ॥ ವಾಸೀಂ ಮಿರ್ಜಾ ಕಾಡಾನೆಯು ಮೃತಪಟ್ಟಿರುವ ವಿಷಯ ತಿಳಿಸಿದ



ಸ್ಥಳಕ್ಕೆ ಭೇಟಿ ನೀಡಿದ ಎಸ್.ಪ್ರಭಾಕರನ್ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗು ನಿರ್ದೇಶಕರು ರವೀಂದ್ರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ವಲಯ ಅರಣ್ಯಾಧಿಕಾರಿ ಪುನೀತ್‌ಕುಮಾರ್ ರಘುರಾಂ, ಎನ್.ಟಿ.ಸಿ.ಎ ಪ್ರತಿನಿಧಿ, ಗುಂಡ್ಲುಪೇಟೆ ಕಾಡಾನೆಯ ಮರಣೋತ್ತರ ಪರೀಕ್ಷೆಯನ್ನು ನಡೆಸಿ ಕಾಡಾನೆಯ ಅಂಗಾಂಗಳನ್ನು ಸಂಗ್ರಹಿಸಿ, ವಿಧಿ ವಿಜ್ಞಾನ ಪ್ರಯೋ

ಗಾಲಯಕ್ಕೆ ಸ್ಯಾಂಪಲ್‌ಗಳನ್ನು ಕಳುಹಿಸಲು ತೀರ್ಮಾನಿಸಿ ಬಳಿಕ ಮೃತ ಹೆಣ್ಣಾನೆಯನ್ನು ಅಲ್ಲಿಯೇ ಜೆ.ಸಿ.ಬಿ ಸಹಾಯದಿಂದ ಗುಂಡಿ ತೆಗೆದು ಹೂಳಲಾಗಿದೆ

## ನಿಮ್ಮ ಒಂದು ಮತ ಪ್ರಜಾಪ್ರಭುತ್ವ, ಸಂವಿಧಾನ ರಕ್ಷಿಸುತ್ತದೆ: ಪ್ರಿಯಾಂಕಾ ಗಾಂಧಿ ವಾದ್ರಾ

ನವದೆಹಲಿ: ಐದನೇ ಹಂತದ ಲೋಕಸಭೆ ಚುನಾವಣೆಯಲ್ಲಿ ಮತದಾನ ಮಾಡುವಂತೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಜನರಿಗೆ ಕರೆ ನೀಡಿದ್ದಾರೆ. ಒಂದು ಮತವು ದೇಶವನ್ನು ಹಣದುಬ್ಬರ, ನಿರುದ್ಯೋಗ ಮತ್ತು ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತಗೊಳಿಸುತ್ತದೆ ಎಂದು ಹೇಳಿದ್ದಾರೆ.

ಐದನೇ ಹಂತದಲ್ಲಿ ಆರು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳ 49 ಕ್ಷೇತ್ರಗಳಲ್ಲಿ ಮತದಾನ ನಡೆಯುತ್ತಿದ್ದು, ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ಸ್ಮೃತಿ ಇರಾನಿ ಮತ್ತು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿಗಳಂತಹ ಹಲವಾರು ಪ್ರಮುಖ ನಾಯಕರ ಚುನಾವಣಾ ಭವಿಷ್ಯವನ್ನು ನಿರ್ಧರಿಸಲಿದೆ.

ಈ ಸಂಬಂಧ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಪ್ರಿಯಾಂಕಾ, ನಿಮ್ಮ ಒಂದು ಮತದಿಂದ ಪ್ರತಿ ಬಡಕುಟುಂಬದ ಮಹಿಳೆಯ ಬ್ಯಾಂಕ್ ಖಾತೆಗೆ ವಾರ್ಷಿಕವಾಗಿ 1 ಲಕ್ಷ ರು. ಜಮೆ ಆಗಲಿದೆ. ಪ್ರತಿಯೊಬ್ಬ ನಾಗರಿಕ 25 ಲಕ್ಷದವರೆಗೆ ಉಚಿತ ಚಿಕಿತ್ಸೆ ಪಡೆಯಲಿದ್ದಾನೆ. ಯುವಕರು 30 ಲಕ್ಷ ಸರ್ಕಾರಿ ಹುದ್ದೆ ಪಡೆಯಲಿದ್ದಾರೆ. ಯುವಕರು ವರ್ಷಕ್ಕೆ 1 ಲಕ್ಷ ರು. ಅಪ್ರೆಂಟೀಸ್‌ಶಿಪ್ ಪಡೆಯಲಿದ್ದಾರೆ. ಎಸ್‌ಸಿ, ಎಸ್‌ಟಿ,ಒಬಿಸಿ ಜನರಿಗೆ ಸ್ಥಾನಮಾನ ಸಿಗಲಿದೆ. ನಿಮ್ಮ ಒಂದು ಮತ ದೇಶದ ಪ್ರಜಾಪ್ರಭುತ್ವ, ಸಂವಿಧಾನವನ್ನು ರಕ್ಷಿಸಲಿದೆ'ಪ್ರಿಯಾಂಕಾ ಗಾಂಧಿ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

# ಬರ ಪರಿಹಾರ ಹಾಗೂ ನಿರ್ವಹಣೆ ಸಭೆ

ತಿ.ನರಸೀಪುರ. ಮೈಸೂರು ಜಿಲ್ಲೆಯ 9 ತಾಲ್ಲೂಕುಗಳ ಪೈಕಿ ತಿ.ನರಸೀಪುರ ತಾಲ್ಲೂಕು ತೀವ್ರ ಮಳೆ ಕೊರತೆ ಕಂಡಿದೆ ಎಂದು ತಾಲ್ಲೂಕು ದಂಡಾಧಿಕಾರಿ ಸುರೇಶಾಚಾರ್ ತಿಳಿಸಿದರು.

ಪಟ್ಟಣದ ತಾ.ಪಂ.ಸಭಾಂಗಣದಲ್ಲಿ ನೆಡದ ಬರ ಪರಿಹಾರ ಹಾಗೂ ನಿರ್ವಹಣೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸುರೇಶಾಚಾರ್

ತಿ.ನರಸೀಪುರ ತಾಲ್ಲೂಕಿನಲ್ಲಿ ಈ ಬಾರಿ ಜಿಲ್ಲೆಯ ಇತರೆ ತಾಲ್ಲೂಕಿಗಳಿಗಿಂತ ಅತಿ ಕಡಿಮೆ ಮಳೆ ಬಿದ್ದಿರುವುದರಿಂದ ತಾಲ್ಲೂಕಿನಲ್ಲಿ ಅತಿ ಹೆಚ್ಚು ಬೆಳೆ ನಷ್ಟವಾಗುದೆ. ಎಂದರು.

2023 ರಲ್ಲಿ ಜಿಲ್ಲೆಯಲ್ಲಿ ವಾಡಿಕೆಯಂತೆ ಶೇ 15 ರಷ್ಟು ಮಳೆ ಕೊರತೆಯಾದರೆ ಈ ಸಾಲಿನಲ್ಲಿ ಶೇ 70.3 ರಷ್ಟು ಮಳೆ ಕೊರತೆ ಉಂಟಾಗಿದೆ ಇನ್ನು ನಮ್ಮ ತಾಲ್ಲೂಕಿನಲ್ಲಿ ವಾಡಿಕೆಯಂತೆ 738.2 ಮಿ.ಮೀಟರ್ ಮಳೆಯಾಗಬೇಕಿತ್ತು ಆದರೆ ಮೇ 01:24 ರವರೆಗೆ ಶೇ 74.5 ಮಿ.ಮೀಟರ್ ಮಳೆಯಾಗಿದ್ದು ಶೇ 92 ರಷ್ಟು ಮಳೆ ಕೊರತೆಯಾಗಿದೆ ಎಂದರು.

ಕಳೆದ ವರ್ಷ ತೀರ ಮಳೆ ಕಡಿಮೆ ಇದ್ದ ಕಾರಣ ಬೆಳೆ ನಷ್ಟವಾಗಿರುವುದನ್ನ ಮನೆಗಂಡ ಸರ್ಕಾರ ರಾಜ್ಯ ಮಟ್ಟದಲ್ಲಿ ಉನ್ನತ ಅಧಿಕಾರಿಗಳ ಸಮಿತಿ ರಚನೆ ಮಾಡಿ ಎಷ್ಟು ಪ್ರಮಾಣದಲ್ಲಿ ಬಿತ್ತನೆ ಮತ್ತು ನಷ್ಟ ಆಗಿದೆ ಎಂಬ ವರದಿ ನೀಡುವಂತೆ ಸೂಚನೆ ನೀಡಿತ್ತು ಅದರಂತೆ ಗ್ರಾಮ ಆಡಳಿತಾಧಿಕಾರಿ ಗಳು ಹಾಗೂ ಕೃಷಿ ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಯಾವ ಬೆಳೆಗಳು ಎಷ್ಟು ಪ್ರಮಾಣದಲ್ಲಿ ನಷ್ಟ ಆಗಿದೆ ಎಂಬ ಮಾಹಿತಿ ಪಡೆದು ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಒಟ್ಟಾರೆ ನಮ್ಮ ತಾಲ್ಲೂಕಿನಲ್ಲಿ 514.8 ಹೆಕ್ಟೇರ್ ಜೋಳ, 518 ಹೆಕ್ಟೇರ್ ನೆಲಗಡಲೆ ಹಾಗೂ 39.1 ಹೆಕ್ಟೇರ್ ರಾಗಿ ಒಟ್ಟು 1071.9



ಹೆಕ್ಟೇರ್ ಪ್ರದೇಶದ ಬೆಳೆ ನಷ್ಟವಾಗಿದೆ. ಪರಿಹಾರ ನೀಡುವ ವಿಧಾನ:–ರೈತರಿಗೆ ಬೆಳೆ ಪರಿಹಾರದ ಹಣವನ್ನು ನೀಡಲು ಪ್ರೂಟ್ಸ್ ತಂತ್ರಜ್ಞಾನ ಪ್ರಾರಂಭಿಸಲಾಯಿತು ರೈತರ ಖಾತೆಗೆ ಆಧಾರ್ ಜೋಡಣೆ ಮಾಡಿ ಯಾವ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಆಗಿದೆ ಆ ಖಾತೆಗೆ ಬರ ಪರಿಹಾರ ಹಣ ಹಾಕಲು ತೀರ್ಮಾನ ಮಾಡಿ ಅದರಂತೆ ಹಣ ಜಮಾ ಮಾಡಲಾಯಿತು.

ಇವತ್ತು ಶೇ.76.01 ರಷ್ಟು ರೈತರ ಜಮೀನನ್ನು ಪ್ರೂಟ್ಸ್ ಸಂಪರ್ಕ ಮಾಡಲಾಗಿದೆ ಇನ್ನು ಶೇ.24 ರಷ್ಟು ರೈತರ ಪ್ರೂಟ್ಸ್ ಐಡಿ ಆಗಬೇಕಾಗಿದೆ ಕೆಲವು ಜಮೀನುಗಳು 3 ಮತ್ತು 4 ತಲೆಮಾರಿನ ಹೆಸರಿನಲ್ಲೆ ಖಾತೆ ಇರುವುದರಿಂದ ಪ್ರೂಟ್ಸ್ ಐಡಿ ಆಗಿಲ್ಲ.24 ಸಾವಿರ ರೈತರ ಜಮೀನು ಪ್ರಸ್ತುತರ ಹೆಸರಿಗೆ ಪೌತಿ ಖಾತೆ ಆದರೆ ಈ ಸಮಸ್ಯ ಬಗೆಹರಿಯಲಿದೆ ಎಂದರು.

ಪ್ರೂಟ್ಸ್ ಆಧಾರಿಸಿ ನೀಡಿದ ಪರಿಹಾರ:– ಮಳೆ ಆಶ್ರಯ ಪ್ರದೇಶಕ್ಕೆ ಪ್ರತಿ ಹೆಕ್ಟೇರ್ ಗೆ ಎರಡು ಸಾವಿರದಂತೆ 1395 ಜನರಿಗೆ 25 ಲಕ್ಷ 6 ಸಾವಿರ 278 ರೂಗಳನ್ನು 9 ಕಂತುಗಳಲ್ಲಿ ಅವರ ಖಾತೆಗೆ ಜಮ ಮಾಡಲಾಗಿದೆ. 137 ಜನರಿಗೆ ವಿವಿಧ ಕಾರಣಗಳಿಂದ ಅವರ ಖಾತೆಗೆ ಹಣ ಜಮಾ ಆಗಿಲ್ಲ ಮುಂದಿನ ದಿನಗಳಲ್ಲಿ ಅಂತಹ ರೈತರ ಮನೆ ಮನೆಗೆ ಹೋಗೆ ಮಾಹಿತಿ ಸಂಗ್ರಹಿಸಿ ಸಮಸ್ಯ ಬಗೆ ಹರಿಸಲಾಗುವುದು ಎಂದರು. ಆಧಾರ್ ಸೀಡಿಂಗ್:–ಪ್ರಸ್ತುತದಲ್ಲಿ ಸರ್ಕಾರದ ಆದೇಶದಂತೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಆರ್.ಟಿ.ಸಿಗೆ ಆಧಾರ್ ಸೀಡಿಂಗ್ ಮಾಡುವ ಕೆಲಸ ನೆಡಯುತಿದೆ, ತಾಲ್ಲೂಕಿನಲ್ಲಿ 2.71 ಲಕ್ಷ ಪಹಣೆ ಇದ್ದು ನೆನ್ನೆವರಗೆ 28 ಸಾವಿರ ಆಧಾರ್ ಸೀಡಿಂಗ್ ಮಾಡಲಾಗಿದೆ. ಗ್ರಾಮ ಆಡಳಿತಾಧಿಕಾರಿಗಳು ಮೆ 13:2024 ರಿಂದ ಮೇ 27 ರವರೆಗೆ ಬೆಳಿಗ್ಗೆ 9.30 ರಿಂದ ಮಧ್ಯಾನ 2 ಗಂಟೆ ವರಗೆ ನಿಗದಿತ ಗ್ರಾಮದಲ್ಲಿ ಇದ್ದು ರೈತರ ಬಾಕಿ ಕೆಲಸದೊಂದಿಗೆ ಆಧಾರ್ ಸೀಡಿಂಗ್ ಕೆಲಸ ಮಾಡುತ್ತಿದ್ದಾರೆ ರೈತರು ಸಹಕಾರ ನೀಡಬೇಕು ಎಂದರು.

ಪ್ರಕೃತಿ ವಿಕೋಪ:–ಮುಂಗಾರಿ ಹಂಗಾಮಿನಲ್ಲಿ ಪ್ರಕೃತಿ ವಿಕೋಪದ ಬಗ್ಗೆ ಮಾಹಿತಿ ಕಲೆಹಾಕಿದ್ದು ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕರು ನೀಡಿರುವ ಮಾಹಿತಿ ಪ್ರಕಾರ ತಾಲ್ಲೂಕಿನಲ್ಲಿ 8 ಕೋಟಿ ಬೆಳೆ ನಾಶ ಹಾಗೂ ಮನೆ ಸಹ ಬಿದ್ದಿವೆ ಇವರಿಗೆ ಎಸ್.ಡಿ.ಆರ್ ಎಫ್ ನಿಯಮದಂತೆ ಪೂರ್ತಿಯಾಗಿ ನೆಲ ಸಮವಾಗಿರುವ ಮನೆಗೆ 1.20 ಲಕ್ಷ ಸಾವಿರ ಹಾಗೂ ಭಾಗಶಃ ಹಾನಿಯಾಗಿ ರುವ ಮನೆಗೆ 6 ಸಾವಿರ ಹಾಗೂ

ಮಳೆ ಆಶ್ರಯ ಪ್ರದೇಶದ ಪ್ರತಿ ಹೆಕ್ಟೇರ್ ಗೆ 13 ಸಾವಿರ,ನೀರಾವರಿ ಪ್ರದೇಶದ ಪ್ರತಿ ಹೆಕ್ಟೇರ್ ಗೆ 25 ಸಾವಿರ ಹಾಗೂ ಬಹು ವಾರ್ಷಿಕ ಬೆಳೆಗೆ 28 ಸಾವಿರ ರೂಗಳನ್ನು ನೀಡಲಾಗುವುದು ಎಂದರು.

ತಲಕಾಡು ಹಾಗೂ ಬನ್ನೂರು ಭಾಗದ 114 .07 ಹೆಕ್ಟೇರ್ ವಿಸ್ತೀರ್ಣದಲ್ಲಿ 81.4 ಹೆಕ್ಟೇರ್ ಬಾಳೆ ಬೆಳೆ ಬಿತ್ತನೆ ಮಾಡಲಾಗಿದ್ದು ಇದರಲ್ಲಿಶೇ.50.22 ಹೆಕ್ಟೇರ್ ಬಾಳೆ ನಷ್ಟವಾಗಿದೆ ಅಂದಾಜು ಸುಮಾರು 3ಕೋಟಿ 76 ಲಕ್ಷ ನಷ್ಟ ಆಗಿದೆ,ತಲಕಾಡು ಒಂದರಲ್ಲೇ 120 ಫೈಲ್ ಬಂದಿದ್ದು ಉಪ ವಿಭಾಗಾಧಿ ಕಾರಿಗಳಿಗೆ ಕಳಿಸಲಾಗಿದ್ದು ಜರುರಾಗಿ ಪರಿಹಾರ ನೀಡವ ವ್ಯವಸ್ಥೆ ಆಗಲಿದೆ ಎಂದರು. ಕುಡಿಯುವ ನೀರಿಗೆ ಒತ್ತು:–

ತಾಲ್ಲೂಕಿನ ಎಲ್ಲಾ ಗ್ರಾ.ಪಂ.ಗಳಲ್ಲೂ ಕುಡಿಯುವ ನೀರಿನ ಸಮಸ್ಯ ಕಾಡುತ್ತಿದ್ದು ಜಿಲ್ಲಾಧಿಕಾರಿಗಳ ಆದೇಶದಂತೆ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯ ಎದುರಾಗದಂತೆ ಕ್ರಮವಹಿಸಲಾಗಿದ್ದು ಈಗಾಗಲೇ 9 ಗ್ರಾಮಗಳಿಗೆ ಖಾಸಗಿಯವರ ಜೊತೆ ಒಪ್ಪಂದ ಮಾಡಿಕೊಂಡು ಅವರ ಕೊಳವೆ ಬಾವಿ ಮೂಲಕ ಕುಡಿಯುವ ನೀರು ಸರಬರಾಜು ಫೈಪ್ ಲೈನ್ ಜೊತೆ ಫೈಪ್ ಜೋಡಣೆ ಮಾಡಿ ನೀರು ಒದಗಿಸ ಲಾಗುತ್ತಿದೆ ಹಾಗೂ ಎರಡು ಗ್ರಾಮಗಳಲ್ಲಿ ರೀ ಬೋರ್ ಮಾಡಿಸಿದ್ದು ಉಳಿದ ಗ್ರಾಮಗಳಲ್ಲೂ ರೀ ಬೋರ್ ಮಾಡಿಸಲು ಸಿದ್ದತೆ ಮಾಡಿಕೊಳ್ಳ ಲಾಗಿದೆ ಎಂದರು.



## ಬತ್ತಿದ ಲಿಂಗನಮಕ್ಕಿ ಜಲಾಶಯ. ನಿಂತ ಹಸಿರುಮಕ್ಕಿ ಲಾಂಚ್ ಸೇವೆ ...

ಹೊಸನಗರ :– ತಾಲೂಕಿನ ನಿಟ್ಟೂರು ಸಮೀಪದ ಹಸಿರುಮತಿ ಲಾಂಚ್ ಸೆವೆನ್ ಸ್ಥಗಿತಗೊಂಡಿದೆ.ನೀರಿನ ಮಟ್ಟ ಇಳಿಕೆಯಾದ ಹಿನ್ನೆಲೆ ಶರಾವತಿ ಹಿನ್ನೀರು ಭಾಗದ ಹಸಿರುಮಕ್ಕಿ ಲಾಂಚ್ ಸೇವೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಳೆ ಕೊರತೆ ಮತ್ತು ಭಾರಿ ಬಿಸಿಲಿನ ಪರಿಣಾಮ ಶರಾವತಿ ನದಿಯಲ್ಲಿ ನೀರಿನ ಮಟ್ಟ ತಗ್ಗಿದೆ.

ನೀರಿನ ಆಳದಲ್ಲಿದ್ದ ಮರದ ದಿಮ್ಮಿಗಳು ಮೇಲೆ ಬರುತ್ತಿವೆ. ಇವು ಲಾಂಚ್‌ಗೆ ತಾಗಿ ಹಾನಿ ಉಂಟು ಮಾಡಲಿವೆ. ಈ ಹಿನ್ನೆಲೆ ಲಾಂಚ್ ಸೇವೆ ತಾತ್ಕಾಲಿಕ ಅವಧಿಗೆ ಸ್ಥಗಿತಗೊಳಿಸಲಾಗಿದೆ.

ಮಳೆ ಬಂದು ನೀರಿನ ಮಟ್ಟ ಹೆಚ್ಚಳವಾಗುವವರೆಗೆ ಹಸಿರುಮಕ್ಕಿ ಲಾಂಚ್ ಸೇವೆ ಇರುವುದಿಲ್ಲ. ಕಳೆದ ಒಂದು ವಾರದಿಂದ ಲಾಂಚ್‌ನಲ್ಲಿ ಜನರ ಜೊತೆಗೆ ಲಘು ಮತ್ತು ದ್ವಿಚಕ್ರ ವಾಹನಗಳನ್ನು ಮಾತ್ರ ದಾಟಿಸಲಾಗುತ್ತಿತ್ತು. ಈಗ ಲಾಂಚ್ ಸೇವೆ ಸಂಪೂರ್ಣಗ ಸ್ಥಗಿತವಾಗಿದೆ....

ವರದಿ ತನುಜ್ ಕುಮಾರ್.ಹೊಸನಗರ

# ತಂದೆ-ತಾಯಿ ಪಾದ ಪೂಜೆ,ಬಹುದೊಡ್ಡ ಪುಣ್ಯ ಇದ್ದಂತೆ: ಹೂವಿನ ಶಿಗ್ಲಿ ಶ್ರೀ ಗಳು

ಹುಬ್ಬಳ್ಳಿ: ಭೂಮಿಯನ್ನು ಹತ್ತೆಂಟು ಬಾರಿ,ಕಾಶಿಯಾತ್ರೆ ಹಾಗೂ ರಾಮೇಶ್ವರ ತೀರ್ಥ ಕ್ಷೇತ್ರದ ದರ್ಶನ ಭಾಗ್ಯದ ಹತ್ತು ಪಟ್ಟು ಹೆಚ್ಚಿನ ಪುಣ್ಯವು ತಂದೆ–ತಾಯಿ ಪಾದ ಪೂಜೆ ಮಾಡುವುದರಿಂದ ಸಿಗುತ್ತದೆ ಎಂಬುದನ್ನು ನಾವೆಲ್ಲಾ ಅರಿಯಬೇಕು ಎಂದು ಹೂವಿನ ಶಿಗ್ಲಿ ವಿರಕ್ತ ಮಠದ ಪೂಜ್ಯ ಶ್ರೀ ಚನ್ನವೀರ ಮಹಾಸ್ವಾಮಿಗಳು ಹೇಳಿದರು.

ಹುಬ್ಬಳ್ಳಿ ತಾಲೂಕಿನ ಶಿರಗುಪ್ಪಿ ಗ್ರಾಮದ ಪಂ.ನೆಹರೂ ಪ್ರೌಡ ಶಾಲೆಯಲ್ಲಿ ಸನ್ 1997–98 ನೇ ಸಾಲಿನ ಎಸ್.ಎಸ್.ಎಲ್.ಸಿ, ವಿದ್ಯಾರ್ಥಿಗಳು ಏರ್ಪಡಿಸಿದ್ದ ಮಾತಾ– ಪಿತೃಗಳ ಪಾದ ಪೂಜಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಆಚಾರ್ಯ ದೇವೋಭವ,ಎಂಬಂತೆ ನಮ್ಮ ನುಡಿಯಾಗಬೇಕು.ಇಂಥಹ ಕಾರ್ಯ ಮಾಡಿದ ಹಳೆಯ ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ, ಶಾಲು,ಮಾಲೆ ಹರಿದು ಹೋಗುತ್ತವೆ. ಆದರೆ ನೀವು ಹಿರಿಯ ಜೀವಿಗಳಿಗೆ ಕೊಟ್ಟ ನಿಮ್ಮ ಪ್ರೀತಿ



ಬಲು ಮರೆಯುವಂತದ್ದಲ್ಲ.ಶಂಕರಾಚಾರ್ಯರ ು ಸನ್ಯಾಸಿಯಾಗಲು ತಾಯಿ ನಿರಾಕರಿಸಿದಾಗ ನೀರಲ್ಲಿ ಮುಳುಗಿ,ಮೊಸಳೆ ಪಾಶದ ಮೂಲಕ ತಮ್ಮ ಬಯಕೆಯ ದಾರಿ ಕಂಡುಕೊಂಡಿದ್ದು ಮಾತೃ ಹೃದಯಿಯ ವಾತ್ಸಲ್ಯ ಮಯದ ಕರುಣೆ ಎಷ್ಟಿತ್ತೆಂಬುದನ್ನು ಅರಿಯಬೇಕು ಎಂದರು.

ತಾಯಿಯ ಹೃದಯ ವಿಶಾಲವಾಗಿದೆ.ಪುರಾಣ,ಪುಣ್ಯ ಕಥೆಗಳಲ್ಲೂ ಇದು ಅಡಕವಾಗಿದೆ. ತನ್ನ ಹಸಿವು ಮರೆ ಮಾಚಿಯಾದರೂ ಮಗನ ಉದರ ತುಂಬಿಸುವ ಆಕೆಯ ಋಣ ವರ್ಣಿಸಲಾರದ್ದು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕ ಚಂದ್ರಶೇಖರ್ ಜಾಡರ್ ಮಾತನಾಡಿ, ಬಹು ದಿನಗಳ ಕನಸು ನನಸಾಗಿದೆ. ಇದಕ್ಕೆ ಪಟ್ಟ ಪರಿಶ್ರಮ ವರ್ಣಾತೀತವಾಗಿದ್ದು,ತಂದೆ,ತಾಯಿಯ ಋಣವನ್ನು ಅಲ್ಪ ಮಟ್ಟಿಗಾದರೂ ತೀರಿಸಿದ್ದೇವೆಂಬ ತೃಪ್ತಿ ನಮಗಿದೆ.

ಸರಿ,ಸುಮಾರು 27 ವರ್ಷಗಳ ಹಿಂದಿನ ಸಹಪಾಠಿಗಳು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡು ಹೆತ್ತವರೊಡಲು ತಣ್ಣಗಾಗಿಸಿದ ಸಂತೃಪ್ತಿ ನಮಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪತ್ರಕರ್ತ ವೀರೇಶ ಪ್ರಳಯಕಲ್ಮಠ ಮಾತನಾಡಿ, ತಂದೆ,ತಾಯಿ,ಸಮಾಜದ ಋಣ ತೀರಿಸಲು ಅಸಾಧ್ಯ. ಹೆತ್ತೊಡಲು,ಹೊತ್ತ ಹೆಗಲು ಬಹಳಷ್ಟು ಶ್ರೇಷ್ಟವಾದವುಗಳು.ಎಲ್ಲಾ ಕ್ಷೇತ್ರಗಳ ದರ್ಶನ ಪುಣ್ಯಕ್ಕಿಂತಲೂ ಹತ್ತುಪಟ್ಟು ಪುಣ್ಯ ಮಾತಾಪಿತರ ಪುಣ್ಯ ಪಾದ ಪಾದ ಪೂಜೆಯಿಂದ ತಮಗೆಲ್ಲರಿಗೂ ಲಭಿಸಿದೆ ಎಂದರು.

ಶಿವಣ್ಣ ಹುಬ್ಬಳ್ಳಿ, ಮಹಾಬಳೇಶ್ವರ ಅಣ್ಣೀಗೇರಿ, ಶಿವಪುತ್ರಯ್ಯ ಹೊಸಮಠ,ಮಲ್ಲಪ್ಪ ಅಣ್ಣೀಗೇರಿ ಶೇಖಣ್ಣ ಮೆಣಸಿನಕಾಯಿ,ನಿಂಗಪ್ಪ ಕೊಳ್ಳಿ,ಜಕ್ಕಪ್ಪ ಮಲ್ಲಾಡದ, ಎಚ್.ಡಿ.ಪೂಜಾರ ,ನಿಜಲಿಂಗಯ್ಯ ಹಿರೇಮಠ, ಸಹಿತ ಅನೇಕರು ವೇದಿಕೆ ಮೇಲಿದ್ದರು. ಈ ಶಾಲೆಯಲ್ಲಿ ಮೆಟ್ರಿಕ್ ಪೂರೈಸಿ ವಿವಾಹವಾಗಿ ರಾಜ್ಯದ ಬೇರೆ,ಬೇರೆ ಸ್ಥಳಗಳಲ್ಲಿ ವಾಸಿಸುತ್ತಿದ್ದ ಆ ಸಾಲಿನ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಕುಟುಂಬ ಸಮೇತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಮುಖ್ಯಾಂಶಗಳು

*ಶಿರಗುಪ್ಪಿ ನೆಹರು ಪ್ರೌಢ ಶಾಲೆಯಲ್ಲಿ ಕಾರ್ಯಕ್ರಮ

*1997– 98 ನೇ ಸಾಲಿನ ಎಸ್. ಎಸ್.ಎಲ್.ಸಿ. ವಿದ್ಯಾರ್ಥಿಗಳು

*ಕುಟುಂಭ ಸಮೇತ ಬಾಗಿಯಾದ ವಿದ್ಯಾರ್ಥಿಗಳು

* 27 ವರ್ಷದಲ್ಲಿನ ಸಾಧನೆಗಳ ಮೆಲುಕು

* ತಂದೆ–ತಾಯಿಗಳ ಅಕ್ಕರೆಯ ಪಾದಪೂಜೆ

* ಸಂತಸ ಹಂಚಿಕೊಂಡ ಕುಟುಂಭದವರು

* ಮೃತಪಟ್ಟ ವಿದ್ಯಾರ್ಥಿ ಪಾಲಕರಿಗೆ ಸಂತಾಪ

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: 91414 14119 Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085